ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 8 | ಸಂಚಿಕೆ 6 | ಫೆಬ್ರವರಿ 9, 1986 | ಬೆಲೆ 60 ಪೈಸೆ

ಕೇಂದ್ರ ಸರಕಾರದ ಬೆಲೆ ಏರಿಕೆ ವಿರುದ್ಧ

ಫೆ. 17 ರಂದು ರಾಜ್ಯವ್ಯಾಪಿ ಪ್ರತಿಭಟನೆ

ಹೊರದೇಶದ ಆಮದುಗಳಿಗೆ ಭಾರತದ ಬಾಗಿಲನ್ನು ಅಡೆತಡೆಯಿಲ್ಲದೇ ಬಿಚ್ಚಿಬಿಡುವ, ಎಂ ಆರ್ ಟಿ. ಪಿ. ಗಳ ನಿರ್ಬಂಧಗಳನ್ನು ಸಡಿಲಿಸುವ, ಆಧುನಿಕ ತಂತ್ರಜ್ಞಾನ ಯಂತ್ರಗಳು ಹಾಗೂ ಕಂಪ್ಯೂಟರ್‌ಗಳನ್ನು ಸ್ಥಾಪಿಸಲು ಬಹುರಾಷ್ಟ್ರೀಯ ಕಂಪನಿಗಳಿಗೆ ಉತ್ತೇಜನ ನೀಡ ಬಯಸುವ ಕೇಂದ್ರ ಸರ್ಕಾರದ ಹೊಸ ಆರ್ಥಿಕ ನೀತಿ ಜನತೆಯ ಜೀವನವನ್ನು ತತ್ತರಗೊಳಿಸುತ್ತಿದೆ.

ಶ್ರೀಸಾಮಾನ್ಯನ ಮನೆಗೆ ಕನ್ನ ಹಾಕಿ ಬಹುರಾಷ್ಟ್ರೀಯ ಕಂಪನಿಗಳಿಗೂ ಖಾಸಗಿ ಕ್ಷೇತ್ರಕ್ಕೂ, ಪುಷ್ಕಳ ಭೋಜನ ಉಣಬಡಿಸಲು ಸರ್ಕಾರದ ನಿಯಂತ್ರಣದಲ್ಲಿರುವ ಎಲ್ಲಾ ವಸ್ತುಗಳ ಹಾಗೂ ಸೇವೆಗಳ ಬೆಲೆಯನ್ನು ಏರಿಸಬೇಕೆಂದು ವಿಶ್ವ ಬ್ಯಾಂಕನ್ನು ನಿರ್ದೇಶಿಸುತ್ತಿರುವ ರೀಗನಾಮಿಕ್ಸ್ (ರೀಗನರ ಅರ್ಥಶಾಸ್ತ್ರ) ನಿರಂತರವಾಗಿ ಭಾರತದ ಮೇಲೆ ಒತ್ತಡ ತರುತ್ತಿದೆ.

ಭಾರತ ಸರ್ಕಾರ ಈ ರೀಗನಾಮಿಕ್ಸ್‌ಗೆ ಮಾರಲ್ಪಟ್ಟಿದೆ ಎಂಬುದಕ್ಕೆ ವಿಶ್ವ ಪೆಟ್ರೋಲಿಯಂ ಮಾರುಕಟ್ಟೆಯಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಕುಸಿಯುತ್ತಿರುವಾಗ ಪೆಟ್ರೋಲಿಯಂ ಆಧಾರಿತವಾದ ರಸಗೊಬ್ಬರಗಳು ಸೀಮೆ ಎಣ್ಣೆ, ಅಡಿಗೆ ಇಂಧನ, ಪೆಟ್ರೋಲ್ ಮೊದಲಾದವುಗಳ ಬೆಲೆ ಏರಿಸಿರುವುದಕ್ಕಿಂತ ಬೇರೆ ಸಾಕ್ಷಿಯೇನೂ ಬೇಕಾಗಿಲ್ಲ. ಇದರ ಜೊತೆಗೆ ಆಹಾರ ವಸ್ತುಗಳಿಗೆ ಗೋಧಿ, ಅಕ್ಕಿ, ಸಕ್ಕರೆ, ಪಾಮಾಯಿಲ್ ಮೊದಲಾದವುಗಳ ಬೆಲೆಯನ್ನೂ ಏರಿಸಲಾಗಿದೆ. ಶ್ರೀಮತಿ ಇಂದಿರಾ ಗಾಂಧಿಯವರೇ ಸ್ವತಃ ಆರಂಭಿಸಿದ ಬೆಲೆ ಏರಿಕೆ ಈ ವಸ್ತುಗಳ ಬಳಕೆಯನ್ನು ತಗ್ಗಿಸಲು ಎಂಬ ಮತ್ತೆ ಮತ್ತೆ ಕೊಡಲಾದ ನೆಪ ಯಾರನ್ನೂ ತೃಪ್ತಿಗೊಳಿಸುವುದಿಲ್ಲ.

ವಿಶ್ವಬ್ಯಾಂಕ್, ಐ ಎಂ ಎಫ್, ಬಂಡವಾಳಶಾಹೀ ಪ್ರಪಂಚದ ಬಹುರಾಷ್ಟ್ರೀಯ ಕಂಪನಿಗಳು ಹಾಗೂ ಅಮೇರಿಕಾದ ಸರ್ಕಾರದಲ್ಲಿರುವ ರಣಹದ್ದುಗಳಿಗೆ ಈ ಧೋರಣೆ ವಿಪರೀತ ಆನಂದವನ್ನುಂಟು ಮಾಡಿದೆ. ಅದೇ ಸಮಯದಲ್ಲಿ ಬಡ, ಮಧ್ಯಮವರ್ಗಗಳ ದುಡಿಯುವ ಜನತೆಯ ಯಾವುದೋ ವಿಭಾಗಕ್ಕೂ ಅವರನ್ನು ತುಳಿಯುತ್ತಿರುವ ಈ ಹೊರೆಗಳ ಭಾರದಿಂದ ತಪ್ಪಿಸಿಕೊಳ್ಳುವುದು ಸಾಧ್ಯವಾಗದಾಗಿದೆ.

'ಕರ್ನಾಟಕ ಬಂದ್' ರೂಪಿಸಲು ಕರೆ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ನಮ್ಮ ರಾಜ್ಯದಲ್ಲೂ ಪ್ರಜಾಪ್ರಭುತ್ವ ಶಕ್ತಿಗಳಿಗೂ, ಜನತಾ ಪಕ್ಷ ಹಾಗೂ ಸಿಪಿಐ ಗೆ, ಕೇಂದ್ರ ಸರ್ಕಾರದ ಈ ಜನವಿರೋಧಿ ಧೋರಣೆಗಳ ವಿರುದ್ಧ ಕರ್ನಾಟಕ ಬಂದ್ ಕಾರ್ಯಕ್ರಮವೂ ಸೇರಿದಂತೆ ರಾಜ್ಯವ್ಯಾಪೀ ಚಳುವಳಿಯನ್ನು ಯೋಜಿಸಬೇಕೆಂದು ಕರೆ ನೀಡುತ್ತದೆ. ಈ ಬೆಲೆ ಏರಿಕೆಯನ್ನು ದೇಶದ ಎಲ್ಲಾ ವಿರೋಧ ಪಕ್ಷಗಳು, ಕಾರ್ಮಿಕ ಸಂಘಟನೆಗಳು, ಮಹಿಳಾ ಸಂಘಟನೆಗಳು ಖಂಡನೆ ಮಾಡಿವೆ.

ದೇಶದ ವಿವಿಧ ಭಾಗಗಳಲ್ಲಿ ಈ ದರ ಏರಿಕೆಯನ್ನು ಖಂಡಿಸಿ ಕಾರ್ಯಕ್ರಮಗಳು ಜರುಗಿವೆ, ಬಂದ್ ಮೊದಲಾದ ಕಾರ್ಯಕ್ರಮಗಳನ್ನು ಘೋಷಿಸಲಾಗಿದೆ. ದರಗಳು ಏರಿದ ಒಂದೆರಡು ದಿನಗಳಲ್ಲಿ ಪ.ಬಂಗಾಳ ಎಡರಂಗ ಹಾಗೂ ತ್ರಿಪುರಾ ಎಡರಂಗ ಫೆ. 11 ರಂದು ರಾಜ್ಯ ವ್ಯಾಪಿ ಬಂದ್ ಅನ್ನು ಸಂಘಟಿಸಲು ತೀರ್ಮಾನಿಸಿವೆ. ಬೇರೆ ಬೇರೆ ರಾಜ್ಯಗಳಲ್ಲಿ ಈಗಾಗಲೇ ಪ್ರದರ್ಶನಗಳು ಜರುಗಿವೆ. ಆಂಧ್ರಪ್ರದೇಶದಲ್ಲಿ 4ನೇ ದಿನಾಂಕದಿಂದಲೇ ಜಿಲ್ಲಾ ಕೇಂದ್ರಗಳಲ್ಲಿ ನಮ್ಮ ಪಕ್ಷದ ಮೆರವಣಿಗೆ ಪ್ರದರ್ಶನಗಳು ಕೇವಲ 24 ಗಂಟೆಯ ಅವಧಿಯಲ್ಲಿ ರೂಪಿತವಾಗಿ ಯಶಸ್ವಿಯಾಗಿ ಜರುಗಿವೆ, ಜರುಗುತ್ತಿವೆ. ತೆಲುಗು ದೇಶಂ ಮುಖ್ಯಮಂತ್ರಿ ಎನ್. ಟಿ. ರಾಮರಾವ್ ಹಾಗೂ ಪದಾಧಿಕಾರಿಗಳು ಬೆಲೆ ಏರಿಕೆಯನ್ನು ಖಂಡಿಸಿದ್ದಾರೆ.

ರಾಜ್ಯವ್ಯಾಪಿ ಪ್ರತಿಭಟನೆಗೆ ಕರೆ

ನಮ್ಮ ರಾಜ್ಯದಲ್ಲಿಯೇ ಪಕ್ಷದ ರಾಜ್ಯ ಸಮಿತಿ ದಿನಾಂಕ 17.2.86

(8ನೇ ಪುಟ ನೋಡಿ)

ಸೋವಿಯತ್ ಕಮ್ಯುನಿಸ್ಟ್ ಪಕ್ಷದ ಅಧಿವೇಶನಕ್ಕೆ ಸಿ.ಪಿ.ಐ (ಎಂ) ಗೆ ಆಹ್ವಾನ

ಸೋವಿಯತ್ ಒಕ್ಕೂಟ ಕಮ್ಯುನಿಸ್ಟ್ ಪಕ್ಷ ಫೆ 25ರಿಂದ ನಡೆಸಲಿರುವ ತನ್ನ 27ನೇ ಮಹಾಧಿವೇಶನಕ್ಕೆ ಸಿಪಿಐ (ಎಂ) ಗೆ ನೀಡಿದ ಆಹ್ವಾನದ ಮೇರೆಗೆ ಪಾಲಿಟ್ ಬ್ಯೂರೊ ಸದಸ್ಯರಾದ ಕಾ. ಎಂ. ಬಸವಪುನ್ನಯ್ಯ ಹಾಗೂ ಕಾಂ. ಹರ್‌ಕಿಷನ್ ಸಿಂಗ್ ಸುರ್ಜಿತ್‌ರವರು ಭಾಗವಹಿಸುವರು.

ಕ್ಯೂಬಾ: ಕ್ಯೂಬಾ ಕಮ್ಯುನಿಸ್ಟ್ ಪಕ್ಷದ ಮಹಾಧಿವೇಶನದಲ್ಲಿಯೂ ಕಾಂ. ಹರ್ ಕಿಷನ್ ಸಿಂಗ್ ಸುರ್ಜಿತ್ ರವರು ಭಾಗವಹಿಸಿದರು.

ನೂತನ ಶಿಕ್ಷಣ ನೀತಿಯ ವಾಪಸಾತಿಗಾಗಿ

ವಿದ್ಯಾರ್ಥಿಗಳ ಮತಪ್ರದರ್ಶನ

"ನೂತನ ಶಿಕ್ಷಣ ನೀತಿ ವಾಪಸಾಗಲಿ", "ಬರಪರಿಹಾರಕ್ಕೆ ಹೆಚ್ಚಿನ ನೆರವು ಸಿಗಲಿ" "ಕರ್ನಾಟಕ ಶಿಕ್ಷಣ ಮಸೂದೆಗೆ ರಾಷ್ಟ್ರಪತಿಯವರ ಅಂಕಿತ ಬೀಳಲಿ", "ರಾಜ್ಯದಲ್ಲಿ ಅಭಿವೃದ್ಧಿ ಯೋಜನೆಗಳು ಜಾರಿಗೊಳ್ಳಲಿ", "ಎಸ್.ಎಫ್.ಐ ಜಿಂದಾಬಾದ್" ಮೊದಲಾದ ಘೋಷಣೆಗಳು ಬೆಂಗಳೂರು ನಾಗರಿಕರನ್ನು ಹುರಿದುಂಬಿಸಿದವು. ಕರ್ನಾಟಕದ ನಾನಾ ಭಾಗಗಳಿಂದ ಬಂದ ಹತ್ತು ಸಾವಿರಕ್ಕೂ ಮಿಕ್ಕಿದ ವಿದ್ಯಾರ್ಥಿಗಳು ಎಸ್.ಎಫ್.ಐ ನೇತೃತ್ವದಲ್ಲಿ 50,000 ದಷ್ಟು ಸಹಿಗಳನ್ನೊಳಗೊಂಡ ಮನವಿಯನ್ನು ಹೊತ್ತುಕೊಂಡು, ಸಿಲ್ವರ್‌ಜುಬ್ಲಿ ಪಾರ್ಕಿನಿಂದ ವಿಧಾನ ಸೌಧದತ್ತ ಧಾವಿಸುತ್ತಿದ್ದ ದೃಶ್ಯ, ಅವರಲ್ಲಿದ್ದ ಸ್ಫೂರ್ತಿ-ಹುಮ್ಮಸ್ಸು, ಪ್ರಶಂಸನೀಯವಾಗಿತ್ತು. ವಿದ್ಯಾರ್ಥಿಗಳ ಬೇಡಿಕೆಗಳಷ್ಟೇ ಅಲ್ಲ, ರಾಜ್ಯದ ಜನತೆ ಎದುರಿಸುತ್ತಿರುವ ತೀವ್ರ ಬರಗಾಲ ಅಭಿವೃದ್ಧಿ ಯೋಜನೆಗಳ ಕುರಿತೂ ವಿದ್ಯಾರ್ಥಿ ವೃಂದ ಗಮನ ಹರಿಸಿರುವುದು ಅಭಿನಂದನೀಯ.

ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್.ಎಫ್.ಐ.) ಕರೆಯ ಮೇರೆಗೆ ಜನವರಿ 30 ರಂದು ರಾಜ್ಯದ ವಿದ್ಯಾರ್ಥಿ ಚಳುವಳಿಯ ಚರಿತ್ರೆಯಲ್ಲಿ ಕಂಡ ಅಪೂರ್ವ ದೃಶ್ಯ, ವಿದ್ಯಾರ್ಥಿಗಳ ಕೂಗು ವಿಧಾನ ಸೌಧವನ್ನು ಪ್ರವೇಶಿಸಿದಾಗ, ವಿಧಾನ ಸಭೆಯ ಕಾರ್ಯಕಲಾಪಗಳನ್ನು ಬಿಟ್ಟು ಶಿಕ್ಷಣ ಮಂತ್ರಿ ರಘುಪತಿಯವರು ಕಬ್ಬನ್ ಪಾರ್ಕ್‌ಗೆ ಓಡಿ ಬಂದರು. ಮನವಿಯನ್ನು ಸ್ವೀಕರಿಸಿದರು. ಬೇಡಿಕೆಗಳಲ್ಲೊಂದಾದ ವಿಶ್ವವಿದ್ಯಾಲಯ ಸೆನೇಟುಗಳಲ್ಲಿ ವಿದ್ಯಾರ್ಥಿಗಳಿಗೆ 8 ಪ್ರಾತಿನಿಧ್ಯ ನೀಡುವುದಾಗಿ ಸಾರಿದರು. ಇತರ ಬೇಡಿಕೆಗಳನ್ನ ಚರ್ಚಿಸಲು ಎಸ್.ಎಫ್.ಐ ಪ್ರತಿನಿಧಿಗಳನ್ನು ಮಾತುಕತೆಗೆ ಆಹ್ವಾನಿಸಿದರು. ವಿದ್ಯಾರ್ಥಿಗಳ ಚಳುವಳಿಗೆ ತನ್ನ ಬೆಂಬಲ, ಸಹಾನುಭೂತಿ ವ್ಯಕ್ತಪಡಿಸುತ್ತಾ, ಇಂದಿನ ಸಮಾಜ ಪಟ್ಟಭದ್ರ ಹಿತಾಸಕ್ತಿಗಳ ಕಪಿಮುಷ್ಟಿಯಲ್ಲಿ ಸಿಲುಕಿದ್ದು ಡೊನೇಶನ್ ಮುಂತಾದ ಅನಿಷ್ಟಗಳನ್ನು ತೊಡೆದುಹಾಕುವ ಸರಕಾರದ ಕ್ರಮಗಳಿಗೆ ಅಡ್ಡಿಯಾಗುತ್ತಿದೆಂದೂ ಕಾರಣ ಮತ್ತೊಂದು ಶಾಸನವನ್ನು ತರಲಾಗುವುದೆಂದೂ ಆಶ್ವಾಸನೆ ನೀಡಿದರು.

ಎಸ್.ಎಫ್.ಐ ಅಧ್ಯಕ್ಷ ಜಯಕುಮಾರ್, ಕಾರ್ಯದರ್ಶಿ ಆರಾಧ್ಯ ಅವರು ಮಾತಾಡಿ, ಬೃಹತ್ ಸಂಖ್ಯೆಯಲ್ಲಿ ನೆರೆದಿರುವ ವಿದ್ಯಾರ್ಥಿಗಳನ್ನು ಅಭಿನಂದಿಸಿ, ತಮ್ಮ ಬೇಡಿಕೆಗಳನ್ನು ಪಡೆಯಲು ವಿದ್ಯಾರ್ಥಿಗಳು ತಮ್ಮ ಸಂಘಟನೆ ಬಲಪಡಿಸಿ ರಾಜ್ಯಾದ್ಯಂತ ವ್ಯಾಪಕ ಚಳುವಳಿಗೆ ಸಿದ್ಧರಾಗಬೇಕೆಂದು ಕರೆನೀಡಿದರು.

ಸಿಐಟಿಯು ಅಧ್ಯಕ್ಷ ಸೂರ್ಯನಾರಾಯಣರಾವ್, ರೈತ ಸಂಘದ ಅಧ್ಯಕ್ಷ ರಾಮಚಂದ್ರರಾವ್, ಶಾಸಕರಾದ ವೆಂಕಟರಾಮಯ್ಯ, ಟಿ.ಎಸ್. ಮಣಿ, ಡಿ ವೈ ಎಫ್ ಐ ಕಾರ್ಯದರ್ಶಿ ಶಿವರಾಂ ಮೊದಲಾದವರು ಬಹಿರಂಗ ಸಭೆಯಲ್ಲಿ ಮಾತಾಡಿ ಹೋರಾಟಕ್ಕೆ ಬೆಂಬಲ ನೀಡಿದರು. ವಿದ್ಯಾರ್ಥಿಗಳು ಛಿದ್ರಕಾರಿ ಶಕ್ತಿಗಳ ಬಗ್ಗೆ ಎಚ್ಚರಿಕೆ ವಹಿಸಿ ದೇಶದ ಸಮಗ್ರತೆಯನ್ನು ಕಾಪಾಡಲು, ಪ್ರಜಾಪ್ರಭುತ್ವ ಚಳುವಳಿಯನ್ನು ಬಲಪಡಿಸಲು ಕರೆ ನೀಡಿದರು.

ಬಳ್ಳಾರಿ, ರಾಯಚೂರುಗಳಿಂದ ಸಾವಿರಕ್ಕೂ ಮೇಲ್ಪಟ್ಟು ವಿದ್ಯಾರ್ಥಿಗಳು ಬಂದಿರುವುದು ಗಮನಾರ್ಹ.

ಮರುದಿವಸ ನಡೆದ ಎಸ್ ಎಫ್ ಐ ವಿಸ್ತೃತ ಸಭೆಯಲ್ಲಿ ಮುಂದಿನ ಚಳುವಳಿಯ ರೂಪರೇಶೆಗಳನ್ನು ನಿರ್ಧರಿಸಲಾಯಿತು.

ಬಾಟ್ಲಿಂಗ್ ಹಗರಣ : ಭ್ರಷ್ಟಾಚಾರ ನಿಲುಗಡೆಗೆ, ಅಬಕಾರಿ ಮಂತ್ರಿಗಳ ರಾಜೀನಾಮೆಗೆ ಕರೆ

ಸಿ ಪಿ ಐ. (ಎಂ) ಕರ್ನಾಟಕ ರಾಜ್ಯ ಕಾರ್ಯದರ್ಶಿ ಮಂಡಳಿಯು ಆರಾಕ್ ಬಾಟ್ಲಿಂಗ್ ಖಟ್ಲೆಯ ಕುರಿತು ಹೈಕೋರ್ಟು ನೀಡಿರುವ ತೀರ್ಪಿನ ಕುರಿತು ಚರ್ಚಿಸಿ ಜನತಾ ಸರಕಾರ ರಾಜೀವ ಗಾಂಧಿಯವರಂತೆಯೇ ಸಾರ್ವಜನಿಕ ಕ್ಷೇತ್ರವನ್ನು ಅವಹೇಳನ ಮಾಡುವ ಮಾರ್ಗವನ್ನೇ ಅನುಸರಿಸುತ್ತಿದೆಂದೂ, ಆ ಕಾರಣದಿಂದಲೇ ಅದು ಸಾರ್ವಜನಿಕ ಕ್ಷೇತ್ರದಲ್ಲಿರುವ ಮೈಸೂರು ಸಕ್ಕರೆ ಕಂಪೆನಿಗಿಂತಲೂ ಹೆಚ್ಚಾಗಿ ಖಾಸಗಿ ಕಂಟ್ರಾಕ್ಟರರಲ್ಲಿ ನಿಷ್ಠೆ ಮತ್ತು ನಂಬಿಕೆ ಇಟ್ಟಿದ್ದಾರೆಂದೂ ಅಭಿಪ್ರಾಯ ವ್ಯಕ್ತ ಮಾಡಿದೆ. ಜನತಾ ಪಕ್ಷದ ಮಂತ್ರಿಗಳಲ್ಲಿ ಬಹಳಷ್ಟು ಚರ್ಚೆಯಲ್ಲಿರುವ ಮೌಲ್ಯಾಧಾರಿತ ರಾಜಕೀಯವನ್ನು ಅನುಷ್ಠಾನದಲ್ಲಿ ತರಬೇಕೆಂದೂ, ಅದರ ಆಧಾರದಲ್ಲಿ ಅಬ್ಕಾರಿ ಮಂತ್ರಿಯವರಿಂದ ಕೂಡಲೇ ರಾಜೀನಾಮೆಯನ್ನು ಪಡೆದು ಅಬ್ಕಾರಿ ಕಮೀಶನರನ್ನು ಸಸ್ಪೆಂಡ್ ಮಾಡಿ, ಖಾಸಗೀ ಕಂಟ್ರಾಕ್ಟರರ ಕಂಟ್ರಾಕ್ಟನ್ನು ರದ್ದು ಮಾಡಿ, ರಾಜ್ಯ ಸರಕಾರ ನಡೆಸುತ್ತಿರುವ ಮೈಸೂರು ಸಕ್ಕರೆ ಕಂಪೆನಿಗೆ ಬಾಟ್ಲಿಂಗ್ ಗುತ್ತಿಗೆ ಒಪ್ಪಿಸಬೇಕೆಂದೂ ಕೇಳಿಕೊಳ್ಳುತ್ತಿದೆ.

ಈ ಮೇಲಿನ ಬೇಡಿಕೆಗಳಿಗೆ ಒಪ್ಪಿಕೊಳ್ಳುವಂತೆ ಜನತಾ ಸರಕಾರದ ಮೇಲೆ ಒತ್ತಾಯ ತರಲು ಸಾರ್ವಜನಿಕ ಅಭಿಪ್ರಾಯ ಮೂಡಿಸುವ ಕೆಲಸವನ್ನು ತೀವ್ರ ಕೈಗೊಳ್ಳಬೇಕೆಂದೂ, ಆ ರೀತಿಯಲ್ಲಿ ಭ್ರಷ್ಟಾಚಾರ ಮತ್ತು ಸ್ವಜನ ಪಕ್ಷಪಾತದ ವಿರುದ್ಧ ಹೋರಾಡುವ ಆರೋಗ್ಯಕರ ಪರಂಪರೆಯನ್ನು ನಿರ್ಮಿಸಬೇಕೆಂದೂ ಪಕ್ಷದ ಎಲ್ಲಾ ಘಟಕಗಳಿಗೆ ಕರೆಕೊಡುತ್ತದೆ.

ಬೆಂಗಳೂರಿನಲ್ಲಿ ಪ್ರತಿಭಟನಾ ಪ್ರದರ್ಶನ

ಈ ಕರೆಗೆ ಅನುಸಾರವಾಗಿ ಬೆಂಗಳೂರು ಜಿಲ್ಲಾ ಸಮಿತಿ ದಿನಾಂಕ 7-2-86 ರಂದು ನೂರಾರು ಜನರ ಮೆರವಣಿಗೆಯನ್ನು ಏರ್ಪಡಿಸಿ ವಿಧಾನಸೌಧಕ್ಕೆ ತೆರಳಿ ಭ್ರಷ್ಟಾಚಾರದ ವಿರುದ್ಧ, ಜನತಾ ಸರಕಾರದ ನಿಲುವನ್ನು ಖಂಡಿಸಿ ಮುಖ್ಯಮಂತ್ರಿಗಳಿಗೆ ಪ್ರತಿಭಟನೆಯನ್ನು ಸಲ್ಲಿಸಿತು.

ನಲ್ವತ್ತು ತುಂಬಿದ 'ದೇಶಾಭಿಮಾನಿ'ಗೆ ಶುಭಾಶಯಗಳು

ಜನವರಿ 18, 1986ರ ಸಂಚಿಕೆಯೊಂದಿಗೆ ಸಿಪಿಐ [ಎಂ] ನ ಕೇರಳ ರಾಜ್ಯ ಸಮಿತಿಯ ದಿನಪತ್ರಿಕೆ "ದೇಶಾಭಿಮಾನಿ"ಯು ನಲ್ವತ್ತು ವರ್ಷಗಳ ತನ್ನ ಸಾರ್ಥಕ ಅಸ್ತಿತ್ವವನ್ನು ಕಂಡುಕೊಂಡಿದೆ. ನಾಲ್ವತ್ತು ವರ್ಷಗಳ ಹಿಂದೆ ಜನವರಿ 1946ರಂದು ಕಮ್ಯೂನಿಸ್ಟ್ ಪಕ್ಷದ ವಾರಪತ್ರಿಕೆ "ದೇಶಾಭಿಮಾನಿ"ಯನ್ನು ದಿನ ಪತ್ರಿಕೆಯನ್ನಾಗಿ ಹೊರತಂದಿತು. ಮೊದಲು ವಾರಪತ್ರಿಕೆಯಾಗಿದ್ದು ನಂತರ ದಿನ ಪತ್ರಿಕೆಯಾದ ರಾಷ್ಟ್ರದಲ್ಲೇ ಅತ್ಯಂತ ದೀರ್ಘಕಾಲ ಬಾಳಿರುವ ಪಕ್ಷದ ಪತ್ರಿಕೆಯಾದ ದೇಶಾಭಿಮಾನಿಯ ಚರಿತ್ರೆಯು ಕೇರಳದ ಕಮ್ಯೂನಿಸ್ಟ್ ಚಳುವಳಿ ಮತ್ತು ಕಾರ್ಮಿಕವರ್ಗದ ಚರಿತ್ರೆಯ ಪ್ರಮುಖ ಭಾಗವಾಗಿದೆ. ಜನವರಿ 1946ರಂದು 5000 ಪ್ರತಿಗಳೊಂದಿಗೆ ಪ್ರಾರಂಭವಾದ "ದೇಶಾಭಿಮಾನಿ"ಯು ಕಳೆದ ನಾಲ್ಕು ದಶಕಗಳಲ್ಲಿ ಕಮ್ಯೂನಿಸ್ಟರ ಪ್ರಚಾರಕನಾಗಿ, ಸಂಘಟಕನಾಗಿ ಮತ್ತು ಸೈದ್ಧಾಂತಿಕ ಸಾಧನವಾಗಿ ಪಾತ್ರವಹಿಸಿದೆ. ದೇಶಾಭಿಮಾನಿಯು ಕೇರಳದಲ್ಲಿ ಅತ್ಯಂತ ಹೆಚ್ಚಿನ ಪ್ರಸಾರದ ಪತ್ರಿಕೆಗಳಲ್ಲೊಂದಾಗಿದ್ದು ವ್ಯಾಪಕ ಪ್ರಭಾವ ಬೀರುತ್ತಿರುವುದಲ್ಲದೆ ಜನತೆಯ ಗಮನ ಸೆಳೆಯುವಲ್ಲಿ ಬಂಡವಾಳಶಾಹಿಗಳು ನಡೆಸುತ್ತಿರುವ ಪತ್ರಿಕೆಗಳೊಂದಿಗೆ ಸೆಣಸುತ್ತಿದೆ.

ಪತ್ರಿಕೆಯು ಎರಡು ಸಂಚಿಕೆಗಳನ್ನು ಹೊಂದಿದ್ದು ಕ್ಯಾಲಿಕಟ್ ಮತ್ತು ಕೊಚಿನ್‌ಗಳಿಂದ ಹೊರಬರುತ್ತಿದೆ. ತನ್ನದೇ ಆದ ಕಾರ್ಯಾಲಯವನ್ನು ಹೊಂದಿರುವ ದಿನಪತ್ರಿಕೆಯು ಕೇರಳದ ಎಲ್ಲಜಿಲ್ಲೆಗಳಲ್ಲಿ ಪೂರ್ಣಾವಧಿ ವರದಿಗಾರರನ್ನು ಹೊಂದಿದೆ. ತ್ರಿವೇಂದ್ರಂ, ಪಾಲ್ ಘಾಟ್ ಮತ್ತು ಕನ್ನಾನೂರು ಕಛೇರಿಗಳು ಎರಡೂ ಸಂಚಿಕೆಗಳೊಂದಿಗೆ ಟೆಲಿಪ್ರಿಂಟರ್ ಸಂಪರ್ಕ ಹೊಂದಿವೆ. ಅಲ್ಲದೆ ದೆಹಲಿಯಲ್ಲಿ ಸುಸಜ್ಜಿತ ಕಛೇರಿಯಿದ್ದು ಕೊಚಿನ್‌ನೊಂದಿಗೆ ಟೆಲಿಪ್ರಿಂಟರ್ ಸಂಪರ್ಕ ಹೊಂದಿದೆ. ಕೇರಳದಲ್ಲಿಂದು ದೇಶಾಭಿಮಾನಿಯು ನಾಲ್ಕನೇ ಅತ್ಯಧಿಕ ಪ್ರಸಾರದ ಪತ್ರಿಕೆಯಾಗಿದ್ದು ಕೇರಳದ ದುಡಿಯುವ ಜನತೆ ಅದನ್ನು ತಮ್ಮ ಅಧಿಕೃತ ಧ್ವನಿಯೆಂದು ಪರಿಗಣಿಸಿದ್ದಾರೆ.

ಹೋರಾಟದ ಇತಿಹಾಸ

ದೇಶಾಭಿಮಾನಿ ಚರಿತ್ರೆಯು ಕೇರಳದ ಕಮ್ಯೂನಿಸ್ಟ್ ಪಕ್ಷದ ಮತ್ತು ಎಡ ಚಳುವಳಿಯ ಚರಿತ್ರೆಯನ್ನೆ ಪ್ರತಿಬಿಂಬಿಸುತ್ತದೆ. ಹಿಂದೆ ಪತ್ರಿಕೆ ವಹಿಸಿರುವ ಪಾತ್ರವನ್ನು ಮತ್ತು ಅದರ ಇಂದಿನ ಪ್ರಾಮುಖ್ಯತೆಯನ್ನು ತಿಳಿಯಲು ಅದರ ಚರಿತ್ರೆ ತಿಳಿಯುವುದು ಸೂಕ್ತವಾಗಿದೆ.

1936 ರಲ್ಲಿ ಕಾಂಗ್ರೆಸ್ ಸೋಶಿಯಲಿಸ್ಟ್ ಪಕ್ಷದ ಮುಖವಾಣಿಯಾಗಿದ್ದ "ಪ್ರಭಾತಮ್" ದೇಶಾಭಿಮಾನಿಯ ಮೂಲದಲ್ಲಿದೆ ಕಾ. ಇ. ಎಂ. ಎಸ್. ಸಂಪಾದಕರಾಗಿದ್ದ ಪ್ರಭಾತಮ್ ಪಾಲ್ ಘಾಟ್ ಜಿಲ್ಲೆಯ ಶೋರನೂರ್‌ನಲ್ಲಿ ವಾರಪತ್ರಿಕೆಯಾಗಿ ಹೊರಬಂದಿತು. "ದೇಶದ್ರೋಹದ" ಲೇಖನವಿತ್ತೆಂಬ ಆರೋಪದ ಮೇಲೆ ಬ್ರಿಟಿಷ್ ಸರ್ಕಾರ ದೊಡ್ಡ ಮೊತ್ತದ ಹಣವನ್ನು ಸರಕಾರದ ಬಳಿ ಇಡಬೇಕೆಂಬ ನಿಬಂಧನೆಯನ್ನು ಹೇರಿದ್ದಕ್ಕಾಗಿ ಆರುತಿಂಗಳಲ್ಲೇ ಪತ್ರಿಕೆ ನಿಲ್ಲಬೇಕಾಯಿತು. ಪುನಃ ಅಕ್ಟೋಬರ್ 1938 ರಲ್ಲಿ ಪ್ರಾರಂಭಗೊಂಡು ಸೆ. 1939 ರಲ್ಲಿ ಯುದ್ಧ ಪ್ರಾರಂಭವಾಗುವವರೆಗೆ ಹೊರಬಂದಿತು. ಈ ಅವಧಿಯಲ್ಲಿ ಪ್ರಭಾತಮ್ ಮಲಬಾರ್ ಪ್ರದೇಶದ ಎಡ ಪತ್ರಿಕೋದ್ಯಮದ ಮುಂಚೂಣಿಯಲ್ಲಿದ್ದು, ಕಾಂಗ್ರೆಸ್ ಸೋಶಿಯಲಿಸ್ಟ್ ಪಕ್ಷದ, ಕಾರ್ಮಿಕ ಸಂಘಗಳ, ರೈತಾಪಿ ಜನಗಳ ಸಂಘಟಕನಾಗಿ ಪ್ರಮುಖ ಪಾತ್ರ ವಹಿಸಿತು

1942 ರಲ್ಲಿ ಕಮ್ಯೂನಿಸ್ಟ್ ಪಕ್ಷದ ಮೇಲಿನ ನಿರ್ಬಂಧವನ್ನು ತೆಗೆಯುವುದರೊಂದಿಗೆ ಪಕ್ಷವು ಕಲ್ಲಿಕೋಟೆಯಿಂದ ದೇಶಾಭಿಮಾನಿಯನ್ನು ವಾರಪತ್ರಿಕೆಯನ್ನಾಗಿ ಹೊರತಂದಿತು ಎಂ. ಎಸ್. ದೇವದಾಸ್ ಸಂಪಾದಕರಾಗಿದ್ದು ಇ ಎಂ. ಎಸ್., ಪಿ. ಕೃಷ್ಣಪಿಳ್ಳೆ ಮತ್ತು ಎ. ಕೆ ಜಿ. ಇದರಲ್ಲಿ ತೀವ್ರವಾಗಿ ತೊಡಗಿಸಿ ಕೊಂಡಿದ್ದರು.

ಇಲ್ಲಿಂದ ಮುಂದೆ ಪಕ್ಷದ ಬೆಳವಣಿಗೆ ಪ್ರತಿಯೊಂದು ಘಟ್ಟದಲ್ಲೂ ಪಕ್ಷ ಎದುರಿಸಿದ ಏಳುಬೀಳುಗಳಲ್ಲಿ ದೇಶಾಭಿಮಾನಿಯು ಅವಿಭಾಜ್ಯ ಅಂಗವಾಗಿದೆ. ಪಕ್ಷವು ಸಾಮೂಹಿಕ ಪಕ್ಷವಾಗಿ ಮಾರ್ಪಾಡಾಗುವ ಘಟ್ಟದಲ್ಲಿ ಹೊರಬಂದ ಪತ್ರಿಕೆಯೂ ಅನತಿ ಕಾಲದಲ್ಲೇ ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ದಮನಕ್ಕೆ ಒಳಗಾಯಿತು ಪಕ್ಷದ ನಿಲುವು ಮತ್ತು ನೀತಿಗಳನ್ನು ಒಳಗೊಂಡ ಇ.ಎಂ ಎಸ್. ಲೇಖನದೊಂದಿಗೆ ಸೆಪ್ಟಂಬರ್ 6, 1942 ರಂದು ಮೊದಲನೆ ಸಂಚಿಕೆ 2000 ಪ್ರತಿಗಳೊಂದಿಗೆ ಹೊರ ಬಂದಿತು. ಮೂರುತಿಂಗಳಲ್ಲೇ ಪ್ರಸಾರ 6000ಕ್ಕೆ ಏರಿತು. ಡಿಸೆಂಬರ್ 1942ರಲ್ಲಿ ತಿರುವನಂತರಪುರ ರಾಜ್ಯದಲ್ಲಿ ಮತ್ತು ಫೆಬ್ರವರಿ 1943ರಲ್ಲಿ ಕೊಚಿನ್ ರಾಜ್ಯದಲ್ಲಿ ಪತ್ರಿಕೆ ನಿಶೇಧಿಸಲಾಯಿತು. ಏಪ್ರಿಲ್ 1943ರಲ್ಲಿ ಮದ್ರಾಸ್ ಸರ್ಕಾರವು ರೂ1000 ಇಡುಗಂಟು ಕೇಳಿತು. ಇವೆಲ್ಲದರ ನಡುವೆಯು ಪತ್ರಿಕೆಯು 5000 ಪ್ರಸಾರ ಹೊಂದಿತ್ತು. ಆದರೆ ಜುಲೈ 1944ರ ಹೊತ್ತಿಗೆ ಕಾಗದದ ನಿಯಂತ್ರಣದೊಂದಿಗೆ ಕೇವಲ 3000 ಪ್ರತಿಗಳನ್ನು ಹೊರತರಲು ಸಾಧ್ಯವಾಯಿತು. ಈ ಅವಧಿಯಲ್ಲಿ ಪತ್ರಿಕೆಯು ಕಮ್ಯೂನಿಸ್ಟ್ ಚಳುವಳಿಯ ಮುಖವಾಣಿಯಾಗಿತ್ತಲ್ಲದೆ ಜನತೆಯ ಹೊಸ ವಿಭಾಗಗಳ ನಡುವೆ ಪಕ್ಷದ ಬೆಳವಣಿಗೆಯ ರೂವಾರಿಯಾಗಿತ್ತು.

ದೈನಿಕ ಹೊರ ಬಂದಿತು

ಜನವರಿ 1946 ರಲ್ಲಿ 5000 ಪ್ರತಿಗಳೊಂದಿಗೆ ದೇಶಾಭಿಮಾನಿ ಹೊರಬಂದಿತು. ಸಂಪಾದಕ ಮಂಡಳಿಯ ಅಧ್ಯಕ್ಷರಾಗಿ ಇಎಂಎಸ್, ಎಂಎಸ್ ದೇವದಾಸ್ ಸಂಪಾದಕ ಮತ್ತು ಪಿ. ನಾರಾಯಣನ್ ನಾಯರ್ ಮ್ಯಾನೇಜರ್ ಆಗಿದ್ದರು. ಪತ್ರಿಕೆಯ ಜನಪ್ರಿಯತೆಯಿಂದಾಗಿ ಮಾರ್ಚ್ 1946ರಲ್ಲಿ ತಿರುವನಂತಪುರದಲ್ಲಿ ನಿಶೇಧಿಸಲ್ಪಟ್ಟಿತು.

ದೇಶಾಭಿಮಾನಿಯ ಸಾಮರ್ಥ್ಯ ಕುರಿತಂತೆ ಸರಿಯಾದ ತಿಳುವಳಿಕೆಯಿದ್ದ ಬ್ರಿಟಿಷರು ಪತ್ರಿಕೆಯನ್ನು ದಮನ ಮಾಡಲು ಎಲ್ಲ ಕ್ರಮ ಕೈಗೊಂಡರು. ನೌಪ್ಲಾ ದಂಗೆಯ 25ನೇ ವರ್ಷಂತಿಯ ಸಂದರ್ಭದಲ್ಲಿ ಪ್ರಕಟಿಸಿದ "ಕರೆ ಮತ್ತು ಎಚ್ಚರಿಕೆ" ಎಂಬ ಲೇಖನವನು ನೆಪ ಮಾಡಿಕೊಂಡು ಇಡುಗಂಟನ್ನು ಮುಟ್ಟುಗೋಲು ಹಾಕಿಕೊಂಡು ಹೆಚ್ಚಿನ ಇಡುಗಂಟನ್ನು ಹೇರಿದರು. ಸಾರ್ವಜನಿಕ ವಂತಿಕೆಯ ಮೂಲಕ ಈ ಹಣವನ್ನು ಕಟ್ಟಿದರೂ "ಸ್ವಾತಂತ್ರ ಹೋರಾಟವನ್ನು ಸಶಕ್ತಿಗೊಳಿಸಲು, ನಾಗರೀಕ ಹಕ್ಕುಗಳನ್ನು ಮರಳಿ ಪಡೆಯಲು" ಎಂಬ ಇನ್ನೊಂದು ಲೇಖನ ಪ್ರಕಟಿಸಿದ್ದಕ್ಕಾಗಿ ಆ ಹಣವನ್ನು ಮುಟ್ಟುಗೋಲು ಹಾಕಿಕೊಂಡರು

ಮದ್ರಾಸ್‌ನಲ್ಲಿ ಪ್ರಕಾಶಂ ಕಾಂಗ್ರೆಸ್ ಸಂಪುಟವಿದ್ದ ಸ್ವಾತಂತ್ರ ಬರುವ ಸಮಯದಲ್ಲಿ ದೇಶಾಭಿಮಾನಿಯನ್ನು ಸ್ತಬ್ಧಗೊಳಿಸಲು ಪರಿಣಾಮಕಾರಿ ಕ್ರಮ ಕೈಗೊಳ್ಳಲು ಬ್ರಿಟಿಷರು ನಿರ್ಧರಿಸಿದರು. "ಮಲಬಾರ್‌ನಲ್ಲಿ ಕಮ್ಯುನಿಸ್ಟರ ಚಟುವಟಿಕೆಗಳು" ಎಂಬ ರಹಸ್ಯ ವರದಿಯಲ್ಲಿ ಡಿಕ್ಸನ್ ಎಂಬ ಉನ್ನತ ಪೋಲೀಸ್ ಅಧಿಕಾರಿ ಕೆಳಗಿನ ಕ್ರಮ ಕೈಗೊಳ್ಳಲು ಸಲಹೆ ಮಾಡಿದನು.

"ದೇಶಾಭಿಮಾನಿಯನ್ನು ಮಟ್ಟ ಹಾಕಬೇಕು; ನಾನು ಚರ್ಚೆ ನಡೆಸಿದ ಕಮ್ಯುನಿಸ್ಟರಲ್ಲದ ಎಲ್ಲ ಅಧಿಕಾರಿಗಳು ಮತ್ತು ಅಧಿಕಾರಿಗಳಲ್ಲದವರೆಲ್ಲರ ಆಲೋಚನೆಯೂ ಇದೇ ಆಗಿದೆ. ಈ ಪತ್ರಿಕೆಯು ನಿರಂತರವಾಗಿ ಜನರನ್ನು ರೊಚ್ಚಿಗೇಳಿಸುವ ಪ್ರಚಾರದಲ್ಲಿ ತೊಡಗಿದೆ.... ಸರ್ಕಾರಿ ಅಧಿಕಾರಿಗಳನ್ನು ಮತ್ತು ಕಾಂಗ್ರೆಸ್ ಸದಸ್ಯರನ್ನು ಟೀಕಿಸುತ್ತದೆ. ಅದರ ಪ್ರಸಾರ ಸಂಖ್ಯೆ ಸೂಚಿಸುವುದಕ್ಕಿಂತ ಹೆಚ್ಚಿನ ಜನರನ್ನು ಅದು ಮುಟ್ಟುತ್ತಿದೆ. ನನಗೆ ಬಂದ ವರದಿಗಳ ಪ್ರಕಾರ ಅನೇಕ ಗ್ರಾಮಾಂತರ ಗ್ರಂಥಾಲಯಗಳಲ್ಲಿ ಜನರಿಗೆ ಓದಿ ಹೇಳಲಾಗುತ್ತದೆ. ಅಲ್ಲದೆ ಬಹುಸಂಖ್ಯೆಯಲ್ಲಿರುವ ಕಮ್ಯೂನಿಸ್ಟ್ ಉಪಾಧ್ಯಾಯರುಗಳು ಶಾಲೆಗಳಲ್ಲಿ ಪತ್ರಿಕೆಯನ್ನು ಓದಿ ವಿವರಿಸುತ್ತಿದ್ದಾರೆ "ದೇಶಾಭಿಮಾನಿ" ಕಮ್ಯುನಿಸ್ಟರು ಹೊಂದಿರುವ ಅತ್ಯಂತ ಪ್ರಮುಖ ಶಕ್ತಿಯುತ ಸಾಧನವಾಗಿದೆ. ಪತ್ರಿಕೆಯ ಇಡುಗಂಟನ್ನು ಮುಟ್ಟುಗೋಲು ಹಾಕಿಕೊಂಡ ನಂತರದ ಅದರ ಚಟುವಟಿಕೆಗಳನ್ನು ಪರಿಶೀಲಿಸಿ ಪತ್ರಿಕೆಯ ವಿರುದ್ಧ ದಾವಾ ಹಾಕಲು ಜಿಲ್ಲಾ ನ್ಯಾಯಾಧೀಶರು ಸೂಚಿಸಿದ್ದಾರೆ."

ಸುಲಭ ನಿಧಿ ಸಂಗ್ರಹ

ಅಧಿಕ ಠೇವಣಿ ಆಜ್ಞಾಪಿಸಿ ದೇಶಾಭಿಮಾನಿ ಪ್ರಕಟಣೆಗೆ ಅನುಮತಿ ನೀಡುವ ಸರ್ಕಾರದ ನೀತಿಯ ವಿರುದ್ಧ ಅಂದಿನ ಮಲಬಾರ್ ಜಿಲ್ಲಾ ನ್ಯಾಯಾಧೀಶ ರಹಸ್ಯ ಪತ್ರವೊಂದನ್ನು ಮುಖ್ಯ ಕಾರ್ಯದರ್ಶಿಗೆ ಬರೆದ. ಅವನು ಈ ಕೆಳಗಿನ ಕಾರಣ ನೀಡಿದ್ದ.

"ಪತ್ರಿಕೆ ಪ್ರಕಟವಾಗಲು ಸರಕಾರ ಅನುಮತಿ ನೀಡಬೇಕೆಂಬ ಮಾತಿಗೆ ನನ್ನ ಒಪ್ಪಿಗೆಯಿಲ್ಲ. ಈಗಾಗಲೇ ಎರಡು ಬಾರಿ ಇಡುಗಂಟುಗಳನ್ನು ಮುಟ್ಟುಗೋಲು ಹಾಕಿ ಕೊಳ್ಳಲಾಗಿದೆ. ಇನ್ನೂ ಹೆಚ್ಚಿನ ಇಡುಗಂಟು ಆಜ್ಞಾಪಿಸುವುದು ಉಪಯೋಗವಿಲ್ಲದ ಕ್ರಮ. ಯಾವುದೇ ತೊಂದರೆಯಿಲ್ಲದೆ ಕಮ್ಯೂನಿಸ್ಟ್ ಪಕ್ಷ ಯಾವುದೇ ಮೊತ್ತದ ನಿಧಿ ಸಂಗ್ರಹಿಸಬಲ್ಲದು. ಕಳೆದ ಡಿಸೆಂಬರ್‌ನಲ್ಲಿ ರೂ 4000 ಇಡುಗಂಟು ಕೇಳಿದ್ದಕ್ಕೆ ರೂ 10,000 ಹಣ ಸಂಗ್ರಹಿಸಿದರು. ಇದರಿಂದಾದ ಒಟ್ಟು ಲಾಭ ಕಮ್ಯುನಿಸ್ಟ್ ಪಕ್ಷದ ನಿಧಿ ಸಂಗ್ರಹಕ್ಕೆ ದೊರೆಯಿತು"

ಜಿಲ್ಲಾ ನ್ಯಾಯಾಧೀಶನ ಸಲಹೆಯ ವಿರುದ್ಧ ಅಂದಿನ ಮದ್ರಾಸ್ ಸರ್ಕಾರ ರೂ 10,000 ಇಡುಗಂಟು ಇಟ್ಟು ಪತ್ರಿಕೆಪ್ರಕಟಿಸಲು ಅನುಮತಿ ನೀಡಿತು ಈ ಹಣವನ್ನು ಒಂದೂವರೆ ತಿಂಗಳಲ್ಲಿ ಪಕ್ಷ ಸಂಗ್ರಹಿಸಿತು. ದೇಶಾಭಿಮಾನಿಯನ್ನು ಮುಚ್ಚುವ ಸಂದರ್ಭ ಬಂದಾಗಲೆಲ್ಲ ಪಕ್ಷವು ಕಾರ್ಮಿಕರಿಂದ, ರೈತರಿಂದ ಸಾಮಾನ್ಯ ಜನತೆಯಿಂದ ಹಣ ಸಂಗ್ರಹಿಸಿತು. 1942 ರಿಂದ 1947ರ ಆರು ವರ್ಷದಲ್ಲಿ ಕೇರಳದ ಜನತೆ ಶಕ್ತಿ ಮೀರಿ ಹಣ ಸಹಾಯ ಮಾಡಿದರು 1947 ರಲ್ಲಿ ರೂ 10,000 ಸಂಗ್ರಹಿಸಿದಾಗ ಸಂಪಾದಕ ದೇವದಾಸ್, ಇಎಂ ಎಸ್ ಮತ್ತಿನ್ನಿತರ ನಾಯಕರಾದ ನಾರಾಯಣನ್ ನಾಯರ್, ಉನ್ನಿರಾಜು ಮೊದಲಾದವರೆಲ್ಲ ಜೈಲಿನಲ್ಲಿದ್ದರೂ ಈ ನಿಧಿ ಸಂಗ್ರಹಕ್ಕೆ ಯಾವುದೇ ಆತಂಕವಾಗಲಿಲ್ಲವೆಂಬುದನ್ನು ಗಮನಿಸಬೇಕು

ಕಾಂಗ್ರೆಸ್‌ನಿಂದ ಪತ್ರಿಕೆಯ ನಿಷೇಧ

ಅಧಿಕಾರಕ್ಕೆ ಬಂದ ಕಾಂಗ್ರೆಸಿಗರು ಅವರ ವರ್ಗ ಗುಣಕ್ಕನುಗುಣವಾಗಿ ಪತ್ರಿಕೆಯ ವಿರುದ್ಧದ ಬ್ರಿಟಿಷರ ಸಮರವನ್ನು ಮುಂದುವರಿಸಿದರು.

ವಾಸ್ತವವಾಗಿ ಸ್ವಾತಂತ್ರ್ಯ ಬಂದ ನಂತರವೇ ಕಾಂಗ್ರೆಸ್ ಸರ್ಕಾರ ಆಜ್ಞೆಯ ಮೂಲಕ ಅಂತಿಮವಾಗಿ ದೇಶಾಭಿಮಾನಿಯನ್ನು ನಿಶೇಧಿಸಿದರು. ಕೇರಳ ಮತ್ತು ದೇಶದ ಇನ್ನಿತರ ಭಾಗಗಳಲ್ಲಿ ಕಮ್ಯೂನಿಸ್ಟರ ವಿರುದ್ಧ ಮತ್ತು 1948 ರ ಸಾಮೂಹಿಕ ಚಳುವಳಿಗಳ ವಿರುದ್ಧ ದಮನಕಾರಿ ಧಾಳಿಯನ್ನು ಪತ್ರಿಕೆಯು ಎಡೆಯಿಲ್ಲದೆ ಬಹಿರಂಗಗೊಳಿಸಿತು. ಹೆಚ್ಚು ಇಡುಗಂಟು ಮೂಲಕ ಪತ್ರಿಕೆಯನ್ನು ಮುಚ್ಚಲು ಸಾಧ್ಯವಿಲ್ಲವೆಂದು ತಿಳಿದ ಕಾಂಗ್ರೆಸ್ ಸರ್ಕಾರ ಏಪ್ರಿಲ್ 12, 1948 ರಂದು ಪತ್ರಿಕೆಯನ್ನು ನಿಶೇಧಿಸಲು ನಿರ್ಧರಿಸಿತು. ದೇಶಾಭಿಮಾನಿಯನ್ನು ನಿಲ್ಲಿಸಲಾದರು ಪಕ್ಷವು ಕಾನೂನು ರೀತ್ಯಾ ಮತ್ತು ಕಾನೂನು ಬಾಹಿರವಾಗಿ ವಿವಿಧ ಹೆಸರಿನಲ್ಲಿ ವಾರ ಪತ್ರಿಕೆಗಳನ್ನು ಹೊರತಂದಿತು. ದೇಶಾಭಿಮಾನಿ ದೈನಿಕವು ಡಿಸೆಂಬರ್ 16, 1951 ರಂದು ಪುನಃ ಬೆಳಕು ಕಂಡಿತು

ಪಕ್ಷದೊಂದಿಗೆ ಬೆಳವಣಿಗೆ

ಐವತ್ತರ ದಶಕದಲ್ಲಿ "ದೇಶಾಭಿಮಾನಿಯು" ಕಮ್ಯುನಿಸ್ಟ್ ಮತ್ತು ಎಡ ಚಳುವಳಿಯನ್ನು ತೀವ್ರವಾಗಿ ಕೈಗೊಂಡು ವ್ಯಾಪಕ ಪ್ರಭಾವದ ಕೇರಳದ ಪತ್ರಿಕೆಯಾಯಿತು. ಇದು ಪಕ್ಷದ ತೀವ್ರ ಬೆಳವಣಿಗೆಯಲ್ಲಿ ಪ್ರತಿಬಿಂಬಿಸಿ 1957 ಸಾರ್ವತ್ರಿಕ ಚುನಾವಣೆಯಲ್ಲಿ ಇ ಎಂ ಎಸ್ ಮುಖ್ಯಮಂತ್ರಿಯಾಗಿ ಪಕ್ಷವು ಅಧಿಕಾರಕ್ಕೆ ಬರಲು ಸಾಧ್ಯವಾಯಿತು.

1964 ರಲ್ಲಿ ಪರಿಷ್ಕರಣವಾದಿಗಳಿಂದಾಗಿ ಪಕ್ಷ ಇಬ್ಭಾಗವಾದಾಗ ಕ್ರಾಂತಿಕಾರಿ ಪತ್ರಿಕೆಯ ಸ್ವಾಧೀನಕ್ಕೆ ಸಮರವೇ ನಡೆಯಿತು. ಪತ್ರಿಕೆಯ ಮುದ್ರಣಾಲಯದಲ್ಲಿ ಕೆಲಸ ಮಾಡುತ್ತಿದ್ದ ಒಡನಾಡಿಗಳು ಮತ್ತು ಜನತೆಯ ಸಹಕಾರದೊಂದಿಗೆ ಸಿಪಿಐ(ಎಂ) ಪತ್ರಿಕೆಯನ್ನು ಪಡೆಯಿತು. ಕೊನೆಗೆ ನ್ಯಾಯಾಲಯದಲ್ಲೂ ಇದು ಸ್ಥಿರಗೊಂಡಿತು. ಪರಿಷ್ಕರಣವಾದಿಗಳ ವಿರುದ್ಧ ಹೋರಾಟದಲ್ಲಿ ಪ್ರಭಾವಿ ಮತ್ತು ಸಮರಶೀಲ ಪಾತ್ರವನ್ನು ದೇಶಾಭಿಮಾನಿ ವಹಿಸಿದೆ. ಅದರಿಂದಾಗಿಯೇ 1975-77 ರ ತುರ್ತು ಪರಿಸ್ಥಿತಿಯ ಸಮಯದಲ್ಲಿ ಕೇರಳದಲ್ಲಿ ಈ ಪತ್ರಿಕೆಯ ವಿರುದ್ಧ ಮಾತ್ರ ಮುದ್ರಣಕ್ಕೆ ಮುಂಚಿನ ಸೆನ್ಸಾರ್ ವಿಧಿಸಲಾಗಿತ್ತು.

ಸಿಪಿಐ (ಎಂ) ರೂಪುಗೊಂಡಾಗಿನಿಂದ ದೇಶಾಭಿಮಾನಿ ಮತ್ತು ಅದರ ಸಾಹಿತ್ಯಿಕ ವಾರಪತ್ರಿಕೆ ಪಕ್ಷದ ಬೆಳವಣಿಗೆಗೆ ಮತ್ತು ದುಡಿಯುವ ಜನರ

(6ನೇ ಪುಟ ನೋಡಿ)

ಬರ ಪರಿಹಾರಕ್ಕಾಗಿ ಒತ್ತಾಯಿಸಿ ಪ್ರದರ್ಶನ, ಹೋರಾಟಗಳು

ಬರಗಾಲ ಕರ್ನಾಟಕವನ್ನು ಹಿಂದೆಂದೂ ಇಲ್ಲದಂತೆ ತೀವ್ರವಾಗಿ ಕಾಡಿಸಿದೆ. ಈ ತೀಕ್ಷ್ಣ ಪರಿಸ್ಥಿತಿಯಲ್ಲಿ ಸಂಕಷ್ಟಕ್ಕೊಳಗಾದ ಜನತೆಯ ಪರವಾಗಿ ಪಕ್ಷದ ಘಟಕಗಳು ಹಾಗೂ ಕರ್ನಾಟಕ ಪ್ರಾಂತ ರೈತ ಸಂಘ ಮತ್ತಿತರ ಸಂಘಟನೆಗಳು ಪ್ರದರ್ಶನ, ಧರಣಿ, ಸತ್ಯಾಗ್ರಹ, ಘೇರಾವ್‌ಗಳನ್ನು ವಿವಿಧ ಕಡೆಗಳಲ್ಲಿ ನಡೆಸಿದ್ದಾರೆ.

ಬೆಂಗಳೂರಿನಲ್ಲಿ ಧರಣಿ ಸತ್ಯಾಗ್ರಹ: ರಾಜ್ಯಪಾಲರಿಗೆ ಮನವಿ

ಜನವರಿ 21 ರಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಬೆಂಗಳೂರು ಜಿಲ್ಲಾ ಸಮಿತಿ ಆಶ್ರಯದಲ್ಲಿ ಕರ್ನಾಟಕದಲ್ಲಿ ತೀವ್ರವಾಗಿ ವ್ಯಾಪಿಸಿರುವ ಬರಗಾಲಕ್ಕೆ ಸಂಬಂಧಿಸಿದಂತೆ ಬೆಂಗಳೂರಿನ ಸಿಲ್ವರ್ ಜ್ಯೂಬಿಲಿ ಪಾರ್ಕ್‌ನಿಂದ ಐನೂರು ಕಾರ್ಯಕರ್ತರು ಮೆರವಣಿಗೆ ಹೊರಟು ರಾಜಭವನವನ್ನು ತಲುಪಿ ಬೆಂಗಳೂರು ಜಿಲ್ಲಾ ಸಮಿತಿ ಕಾರ್ಯದರ್ಶಿ ಸೂರಿಯವರ ನೇತೃತ್ವದಲ್ಲಿ ರಾಜ್ಯಪಾಲರಿಗೆ ಐದು ಬೇಡಿಕೆಗಳನ್ನೊಳಗೊಂಡ ಮನವಿಯನ್ನು ಅರ್ಪಿಸಿ ಕೂಡಲೆ ಆ ಬೇಡಿಕೆಗಳನ್ನು ಜಾರಿಗೊಳಿಸಲು ಒತ್ತಾಯಿಸಿದರು.

ಕೇಂದ್ರ ಸರಕಾರ ಬರಗಾಲ ಪರಿಹಾರಕ್ಕಾಗಿ 100 ಕೋಟಿ ರೂಗಳನು ಯೋಜನೆಯ ಹಣದಲ್ಲಿ ಕಡಿತ ಮಾಡದೆ ಬಿಡುಗಡೆ ಮಾಡಬೇಕು, ಧಾನ್ಯವನ್ನು ಶೇಖರಿಸಲಾಗದೆ ಇಲಿ ಹೆಗ್ಗಣಗಳಿಗೆ ಆಹಾರವಾಗಿರುವ ಕನಿಷ್ಠ 4 ರಿಂದ 5 ಲಕ್ಷ ಟನ್ ಧಾನ್ಯವನ್ನು ಬರಗಾಲ ಪೀಡಿತರಿಗೆ ಹಂಚಬೇಕು, ರಾಷ್ಟ್ರೀಕೃತ ಬ್ಯಾಂಕುಗಳು ಬರಗಾಲದ ತಾಲ್ಲೂಕು ದತ್ತು ತೆಗೆದುಕೊಂಡು ಎಲ್ಲಾ ನೆರವನ್ನೂ ನೀಡಬೇಕು, ರೈತರ ಮೇಲಿನ ಸಾಲ ವಸೂಲಿಗಳನ್ನು ಈ ಪ್ರದೇಶಗಳಲ್ಲಿ ಮುಂದೂಡಬೇಕು, ಬರ ಪರಿಹಾರದ ಹಣ ದುರುಪಯೋಗವಾಗದಂತಿರಲು ಸರ್ವ ಪಕ್ಷಗಳ ಪ್ರತಿನಿಧಿಗಳ ಉಸ್ತುವಾರಿ ಸಮಿತಿ ರಚಿಸಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಯಿತು.

ಕಲಕೇರಿ: ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಲಕೇರಿ ಘಟಕವು ದಿನಾಂಕ 20-12-85ರಂದು ಜನತಾ ಸರ್ಕಾರವು ಬರಗಾಲ ಪೀಡಿತ ಪ್ರದೇಶಗಳ ಕಡೆ ಗಮನ ನೀಡದೆ ರೈತ ಕಾರ್ಮಿಕ ವಿರೋಧಿ ನೀತಿಯನ್ನು ತಳೆದಿರುವುದರ ವಿರುದ್ಧ ಹನ್ನೊಂದು ಬೇಡಿಕೆಗಳನ್ನು ಮುಂದಿಟ್ಟು ಉಪವಾಸ ಸತ್ಯಾಗ್ರಹವನ್ನು ಪ್ರಾರಂಭಿಸಿತು.

ಶಿವಮೊಗ್ಗ :

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಶಿವಮೊಗ್ಗ ಪ್ರಾದೇಶಿಕ ಸಮಿತಿ ದಿನಾಂಕ 21-1-85 ರಂದು ಕಾಂ|| ಚಂದುಕುಟ್ಟಿಯವರ ನೇತೃತ್ವದಲ್ಲಿ ಸಭೆ ಸೇರಿ ಬರ ಪರಿಹಾರಕ್ಕಾಗಿ ಕೇಂದ್ರ ಸರ್ಕಾರವು ನೂರು ಕೋಟಿಗಳನ್ನು ಬಿಡುಗಡೆ ಮಾಡುವಂತೆ ನಿರ್ಣಯವನ್ನು ಸ್ವೀಕರಿಸಿತು

ಯುವಜನರ ಹೋರಾಟ

ಸೊಂಡೂರು :

ಜನವರಿ 20 ರಂದು ಡಿವೈಎಫ್‌ಐ ನೇತೃತ್ವದಲ್ಲಿ ಸೊಂಡೂರು ತಾಲೂಕಿನ ಬಸಾಪುರ ಅಡ್ಡ ರಸ್ತೆಯಾದ ಹೊಸಪೇಟೆ-ಬಳ್ಳಾರಿ ಮುಖ್ಯರಸ್ತೆಯಲ್ಲಿ ಬೆಳಗಿನಿಂದ ಮಧ್ಯಾಹ್ನದವರೆಗೆ ವಾಹನಗಳನ್ನು ತಡೆ ಹಿಡಿಯಲಾಯಿತು ಸುಮಾರು ಸಾವಿರ ಜನ ನೂರಾರು ಜಾನುವಾರುಗಳಲ್ಲದೆ ಎತ್ತಿನ ಗಾಡಿಗಳು ಭಾಗವಹಿಸಿದ್ದ ಈ ರಸ್ತೆ ತಡೆ ಚಳುವಳಿಯು ಯಶಸ್ವಿಯಾಯಿತಲ್ಲದೆ ಸುಮಾರು ಗಂಟೆಗಳವರೆಗೆ ವಾಹನಗಳು ನಿಲುಗಡೆಗೊಂಡಿತ್ತಲ್ಲದೆ ನಂತರ ಮಾರ್ಗವನ್ನು ಬದಲಾಯಿಸಿದವು. ನಂತರ ನಡೆದ ಸಭೆಯನ್ನುದ್ದೇಶಿಸಿ. ಬಸವರಾಜ್ ಮತ್ತು ಚೆನ್ನಬಸವಯ್ಯ ಮತ್ತಿತರರು ಮಾತನಾಡಿದರು.

ಕರ್ನಾಟಕ ಪ್ರಾಂತ ರೈತ ಸಂಘದಿಂದ ಹೋರಾಟ

ಶಿರಗುಪ್ಪ :

ಕರ್ನಾಟಕ ಪ್ರಾಂತ ರೈತ ಸಂಘದ ಶಿರಗುಪ್ಪ ತಾಲೂಕು ಸಮಿತಿ ಜಿಲ್ಲಾ ಸಹಸಂಚಾಲಕರ ನೇತೃತ್ವದಲ್ಲಿ ಸೈಕಲ್ ಜಾಥಾ ನಡೆಸಿ ಪ್ರತಿಯೊಂದು ಹಳ್ಳಿಯಲ್ಲೂ ಭಾಷಣ ಕಾರ್ಯಕ್ರಮವನ್ನು ನಡೆಸಿತು. ನಂತರ 300 ಕಾರ್ಯಕರ್ತರು ಮೆರವಣಿಗೆಯಲ್ಲಿ ತಾಲೂಕು ಕಛೇರಿಗೆ ತೆರಳಿ ಮನವಿಯನ್ನು ಅರ್ಪಿಸಿ ಬಹಿರಂಗ ಸಭೆಯನ್ನು ನಡೆಸಿತು ಬಹಿರಂಗ ಸಭೆಯನ್ನುದ್ದೇಶಿಸಿ ಕಾ|| ಮಹದೇವನ್ ಕಾ|| ಬಸವರಾಜ್ ಮಾತನಾಡಿದರು.

ಗುಲ್ಬರ್ಗಾ :

ಕರ್ನಾಟಕ ಪ್ರಾಂತ ರೈತ ಸಂಘ ಗುಲಬರ್ಗಾ ಘಟಕ ಜೇವರ್ಗಿ ತಾಲೂಕಿನ ನೀರಲ್‌ಕೋಡ್‌ನಿಂದ ಮೆರವಣಿಗೆ ಹೊರಟ ಜಾಥಾ ಕಲಹಂಗರ, ಕೊಟ್ನೂರ, ಜನಿವಾರ, ಹರವಾಳ, ಮಾಂವನೂರ, ಹರನೂರ. ಇಜೇರಿ ಗ್ರಾಮಗಳಲ್ಲಿ ಬಹಿರಂಗ ಸಭೆ ನಡೆಸಿತು. ಈ ಜಾಥಾದ ನೇತೃತ್ವವನ್ನು ಕಲ್ಲಪ್ಪ ಕಿರಣಗಿ, ವೆಂಕೋಬರಾವ್, ವಾಗಟಗೇರಿ, ಅಪ್ಪಾಸಾಹೇಬ ಕಲಹಂಗ, ಪರಮಾನಂದ ಡಾಕ್ಟರ್, ಚಂದ್ರಪ್ಪ ವಿಶ್ವಕರ್ಮ ವಹಿಸಿದ್ದರು.

ಕುಷ್ಟಗಿ

ಕರ್ನಾಟಕ ಪ್ರಾಂತ ರೈತ ಸಂಘ, ಕುಷ್ಟಗಿ ಘಟಕವು ದಿನಾಂಕ 23-12-85 ರಂದು ಮೂಳೆಚಕ್ಕಳವಾದ ಐನೂರು ದನಗಳ ಮೆರವಣಿಗೆ ನಡೆಸಿ ತಹಸೀಲ್ದಾರ್ ಕಛೇರಿಗೆ ಮುತ್ತಿಗೆ ಹಾಕಿ ಮನವಿ ಅರ್ಪಿಸಲಾಯಿತು.

27-12-85 ರಂದು ಸ್ಥಳಕ್ಕೆ ಭೇಟಿ ನೀಡಿದ ಮುಖ್ಯಮಂತ್ರಿಗಳು, ಸಚಿವರಾದ ಎಸ್.ಆರ್. ಬೊಮ್ಮಾಯಿ ಪುಷ್ಪಾವತಿಯವರಿಗೆ ಪ್ರಾಂತ ರೈತ ಸಂಘದ ಕಾರ್ಯದರ್ಶಿ ಕಳಕಪ್ಪ ನಾಯಕವಾಡಿ ನೇತೃತ್ವದಲ್ಲಿ ಮನವಿಯನ್ನು ಅರ್ಪಿಸಿದರು. ಈ ಭೇಟಿಯಲ್ಲಿ ಬರಗಾಲ ಕಾಮಗಾರಿಯಲ್ಲಿ ನಡೆಯುತ್ತಿರುವ ಅವ್ಯವಹಾರದ ಬಗ್ಗೆ ಮುಖ್ಯಮಂತ್ರಿಯವರ ಗಮನ ಸೆಳೆಯಲಾಯಿತಲ್ಲದೆ ಗೋಶಾಲೆಗಳನ್ನು ಪ್ರಾರಂಭಿಸಲು ಒತ್ತಾಯಿಸಲಾಯಿತು.

ತುಮಕೂರು :

ಜನವರಿ 31 ರಂದು ಪ್ರಾಂತ ರೈತ ಸಂಘದ ತುಮಕೂರು ಜಿಲ್ಲಾ ಘಟಕ ಬರ ಪರಿಹಾರಕ್ಕಾಗಿ ಜಿಲ್ಲಾಧಿಕಾರಿಗಳ ಕಛೇರಿ ಬಳಿ ಸಾಂಕೇತಿಕ ಧರಣಿ ಸತ್ಯಾಗ್ರಹ ನಡೆಸಿ ವಿಶೇಷ ಜಿಲ್ಲಾಧಿಕಾರಿಗಳಿಗೆ ಮನವಿ ಅರ್ಪಿಸಿದರು ಈ ಧರಣಿಯ ನೇತೃತ್ವವನ್ನು ಗೋವಿಂದರಾಜು ಚನ್ನಪ್ಪ, ದಾಸಪ್ಪ, ಶ್ರೀನಿವಾಸ್, ಚೆಲುವರಾಜುರವರು ವಹಿಸಿದ್ದರು. ಗುಬ್ಬಿ, ಶಿರಾ, ಕುಣಿಗಲ್, ಚಿಕ್ಕನಾಯಕನ ಹಳ್ಳಿಯಲ್ಲೂ ಧರಣಿ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು.

ಲಿಂಗಸುಗೂರು :

ಡಿಸೆಂಬರ್ 2 ರಂದು ಪ್ರಾಂತ ರೈತ ಸಂಘದ ಲಿಂಗಸುಗೂರ ತಾಲೂಕು ಸಮಿತಿ ಬರಗಾಲವನ್ನ ಕುರಿತು ಹಿಂದೆ ಕಾಲುಜಾಥಾ ನಡೆಸಿದ್ದರೂ ಯಾವುದೇ ಕ್ರಮ ತೆಗೆದುಕೊಳ್ಳದ ಸರ್ಕಾರಿ ನೀತಿಯನ್ನು ಖಂಡಿಸಿ ತಾಲೂಕು ಕಛೇರಿ ಬಳಿ ಅನಿರ್ದಿಷ್ಟ ಸತ್ಯಾಗ್ರಹವನ್ನು ಪ್ರಾರಂಭಿಸಿದರು.

ಕೊಡಗಿನಲ್ಲಿ ಪ್ರತ್ಯೇಕತಾವಾದದ ಬೀಜ

ಕೊಡಗಿನಲ್ಲಿ "ಮೂಲ ನಿವಾಸಿಗಳ ಸಂಘ"ವೆಂಬುದರ ಹೆಸರಿನಲ್ಲಿ, ಕೊಡಗು ಕೊಡಗರಿಗಾಗಿ ಎಂಬ ಘೋಷಣೆಯ ಹೆಸರಿನಲ್ಲಿ, ಹೊರಗಿನಿಂದ ಬಂದವರನ್ನು ಪೀಡಿಸುವ, ಹಿಂಸಿಸುವ, ಕೊಲೆಮಾಡುವ ಕೃತ್ಯಗಳಲ್ಲಿ ತೊಡಗಿದ್ದನ್ನು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ರಾಜ್ಯಸಮಿತಿ ಬಯಲಿಗೆಳೆದು ಕರ್ನಾಟಕದ ಜನತೆಯ, ಸರ್ಕಾರದ ಗಮನಕ್ಕೆ ತಂದಿತು, ಸೂಕ್ತಕ್ರಮಕೈಗೊಳ್ಳಲು ಸರಕಾರವನ್ನು ಒತ್ತಾಯಿಸಿತು ಜನತೆಯ ಒಗ್ಗಟ್ಟನ್ನು, ಸೌಹಾರ್ದಭಾವನೆಯನ್ನು ಒಡೆಯಲು ಈ ಅಂಧಾಭಿಮಾನದ ಚಟುವಟಿಕೆಗಳು ಅಲ್ಲಿಯ ಭೂಮಾಲಿಕರಿಂದ ಪ್ರೇರಿತವಾಗಿ ಮುಂದುವರಿಯುತ್ತಲೇ ಇವೆ ಪಾಳೆಯಗಾರಿ ಭೂಸಂಬಂಧಗಳ ತೀವ್ರರೂಪವಾದ "ಜಮ್ಮಾ" ಭೂಒಡೆತನ ಪದ್ಧತಿಯ ಫಲವಾದ ಭಿನ್ನಕಾರಿಗಳು ಈಗ "ಜನ ಜಾಗೃತಿ" ಸಮಿತಿಯ ಹೆಸರಿನಲ್ಲಿ ಮತ್ತೆ ಅಲ್ಲಿಯ ಕಾಫಿ ತೋಟಗಳಲ್ಲಿ ಕೆಲಸಮಾಡುತ್ತಿರುವ ಕೆಲಸಗಾರರ ಮೇಲೆ, ಸಣ್ಣ ಪುಟ್ಟ ವ್ಯಾಪಾರಿಗಳ ಮೇಲೆ ಬಿದ್ದಿದ್ದಾರೆ.

ಪ್ಲಾಂಟೇಶನ್‌ಗಳಲ್ಲಿ ಕೆಲಸಮಾಡಲು ಜನ ದೊರೆಯದಿದ್ದರೆ ದೂರ ದೂರದ ಊರುಗಳಿಂದ, ನೆರೆ ರಾಜ್ಯಗಳಿಂದ, ಕೃಷಿ ಕಾರ್ಮಿಕರನ್ನು ಪುಸಲಾಯಿಸಿ, ಮೋಸಮಾಡಿ ಸೇರೆಗಾರರ' ಕಂಟ್ರಾಕ್ಟರುಗಳ ಮೂಲಕ ಹಿಡಿದು ತಂದು ಹತ್ತಾರು ವರ್ಷಗಳ ಕಾಲ ಅಗ್ಗವಾಗಿ ದುಡಿಸಿಕೊಂಡು ಲಾಭಗಳಿಸಿದ ಈ ತೋಟ ಮಾಲೀಕರುಗಳು, ಅವರ ಹಿಂಬಾಲಕರಿಗೆ ಈಗ ಈ ಕೂಲಿ ಜನರ, ಮೇಲೆ ಅವರ ದೈನಂದಿನ ಅವಶ್ಯಕತೆಗಳನ್ನು ಪೂರೈಸಲೆಂದು ಬಂದ ಸಣ್ಣ ಪುಟ್ಟ ವ್ಯಾಪಾರಿಗಳ ಮೇಲೆ "ತೋಳನ ಕಣ್ಣು ಕುರಿಯ ಮೇಲೆ"ಎಂಬಂತೆ ಬಿದ್ದಿರುವಂತೆ ಕಾಣುತ್ತದೆ.

ಈ ಬಡಜನರ ಮೇಲೆ ಧಾಳಿನಡೆಸಿ, ಅವರ ಮೇಲೆ ಸುಳ್ಳು ಕೇಸುಗಳನ್ನು ಹಾಕಿಸುವುದಲ್ಲದೆ ವಿರಾಜಪೇಟೆಯಲ್ಲಿ ಈ ಜನರ ಪರವಾಗಿ ವಕಾಲತ್ತು ನಡೆಸುವ ನ್ಯಾಯವಾದಿಗಳಿಬ್ಬರ ಕಛೇರಿಗೆ ನುಗ್ಗಿ ವಕಾಲತ್ತು ವಹಿಸಬಾರದೆಂದು ಬೆದರಿಸುವ ಕಾರ್ಯಕ್ಕೆ ಕೈ ಹಾಕಿದ್ದಾರೆ

ವಿರಾಜಪೇಟೆಯ ಸಿ.ಪಿ.ಐ. [ಎಂ] ಘಟಕದ ಕಾರ್ಯದರ್ಶಿ ಎಂ ಇಬ್ರಾಹಿಂರವರು ಈ ಘಟನೆಯನ್ನು ಹಾಗೂ "ಜನ ಜಾಗೃತಿ ಸಮಿತಿ" ಯ ಚಟುವಟಿಕೆಗಳನ್ನು ಖಂಡಿಸಿದ್ದಾರೆ. ಪ್ರಾದೇಶಿಕ, ಕೋಮು ದುರಭಿಮಾನವನ್ನು ಕೆರಳಿಸಿ ಜನತೆಯ ಹೋರಾಟದ ದಾರಿತಪ್ಪಿಸುವ ಈ ಕುತಂತ್ರಗಳ ವಿರುದ್ಧ ಎಲ್ಲಾ ಪ್ರಜಾಪ್ರಭುತ್ವವಾದಿ, ಎಡಪಂಥೀಯ ಸಂಘಟನೆಗಳು ಹೋರಾಡಬೇಕೆಂದು ವಿನಂತಿಸಿದ್ದಾರೆ.

ಕಾಂ. ರಾಮಚಂದ್ರರಾವ್ ರವರ ಕರೆ

ಇತ್ತೀಚೆಗೆ ವಿರಾಜಪೇಟೆಗೆ ಭೇಟಿಯಿತ್ತಿದ್ದ ಸಿಪಿಐ(ಎಂ) ಕೇಂದ್ರಸಮಿತಿ ಸದಸ್ಯ ಹಾಗೂ ರಾಜ್ಯ ಕಾರ್ಯದರ್ಶಿ ಕಾಂ. ಪಿ ರಾಮಚಂದ್ರ ರಾವ್ ರವರು ಹಾಗೂ ಡಿವೈಎಫ್‌ಐನ ಜಂಟಿ ಕಾರ್ಯದರ್ಶಿ ಎಂ ಎ ಬೇಬಿಯವರು ಭಿನ್ನಕಾರಿಗಳ ಈ ದುರಭಿಮಾನದ ವಿರುದ್ಧ ಹೋರಾಡಬೇಕೆಂದು, ಎಲ್ಲ ದುಡಿಯುವ ಜನತೆ, ಪ್ರಜಾಸತ್ತಾತ್ಮಕ ಶಕ್ತಿಗಳು ಒಂದಾಗಿ ಎದುರಿಸಬೇಕೆಂದು ಕರೆ ನೀಡಿದರು

ನಿರುದ್ಯೋಗಿ ವಿರೋಧಿ ದಿನಾಚರಣೆ: ಬೃಹತ್ ರ್‍ಯಾಲಿಗೆ ಸಿದ್ಧತೆ

ಜನವರಿ 16-17 ರಂದು ವಿರಾಜಪೇಟೆಯಲ್ಲಿ ಸಭೆ ಸೇರಿದ್ದ ರಾಜ್ಯ ಸಮಿತಿಯು ನಿರುದ್ಯೋಗ ವಿರೋಧಿ ದಿನಾಚರಣೆ ಅಂಗವಾಗಿ ಮಾರ್ಚ್ 28ರಂದು ಬೆಂಗಳೂರಿನಲ್ಲಿ ಐದು ಸಾವಿರಕ್ಕೂ ಹೆಚ್ಚು ಜನರ ಬೃಹತ್ ರ್‍ಯಾಲಿಯನ್ನು ಸಂಘಟಿಸಬೇಕೆಂದು ತೀರ್ಮಾನಿಸಿತು.

ಸಭೆಯಲ್ಲಿ, ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ಸಂಘಟನೆಯನ್ನು ವಿಸ್ತರಿಸಲು, ಡಿ ವೈ ಎಫ್ ಐ ಕೇಂದ್ರ ಸಮಿತಿಯ ತ್ರೈಮಾಸಿಕ "ಯೂತ್‌ಸ್ಟ್ರೀಂ" ಪತ್ರಿಕೆಯ ಬಗ್ಗೆ ವಿಶೇಷ ಪ್ರಚಾರ ನಡೆಸಲು ತೀರ್ಮಾನಿಸಲಾಯಿತು. ಮಾರ್ಚ್ 28ರಂದು ವಿಚಾರಸಂಕಿರಣ ನಡೆಸಿ ಸ್ಮರಣ ಸಂಚಿಕೆಯನ್ನು ಹೊರತರಬೇಕೆಂದೂ ಮತ್ತು ಜಿಲ್ಲಾ ಸಮಿತಿಗಳೂ ಸ್ಮರಣಸಂಚಿಕೆಗೆ ಜಾಹಿರಾತನ್ನು ಸಂಗ್ರಹಿಸಿ ಕಳುಹಿಸಲು ರಾಜ್ಯಸಮಿತಿ ಈ ಮೂಲಕ ಕರೆ ನೀಡಿದೆ.

ರಾಜ್ಯ, ಸಮಿತಿ ಸಭೆಯ ನಂತರ 19ರಂದು ವಿರಾಜ ಪೇಟೆಯ ಪುರಭವನದಲ್ಲಿ ಅಧ್ಯಯನ ಶಿಬಿರ ನಡೆಸಲಾಯಿತು. ಸ್ಟ್ಯಾನ್ಲಿವಾಸ್ ಸ್ವಾಗತಿಸಿದರು. ಎಸ್. ಶಿವರಾಂ, ಎಂ. ಎ ಬೇಬಿ ಸತ್ಯನಾರಾಯಣ, ಪಿ ರಾಮಚಂದ್ರರಾವ್ ಶಿಬಿರವನ್ನುದ್ದೇಶಿಸಿ ಮಾತನಾಡಿದರು ದಿನಾಂಕ 19ರಂದು ಸುಮಾರು 400 ಜನರ ಮೆರವಣಿಗೆ ನಡೆಸಿ ಕಾರ್ ನಿಲ್ದಾಣದಲ್ಲಿ ಬಹಿರಂಗ ಸಭೆ ಏರ್ಪಡಿಸಿತು. ಸಭೆಯನ್ನುದ್ದೇಶಿಸಿ ಶಿವರಾಂ, ಅಪ್ಪಣ್ಣ, ಸುಬ್ಬಯ್ಯ, ಸ್ಟ್ಯಾನ್ಲಿವಾಸ್, ಪಿ. ರಾಮಚಂದ್ರರಾವ್ ಮಾತನಾಡಿದರು. ಸತ್ಯನಾರಾಯಣ ಅಧ್ಯಕ್ಷತೆ ವಹಿಸಿದರು. ರಾಂಮೋಹನ್ ಸ್ವಾಗತಿಸಿದರು. ಸುಕುಮಾರ್ ವಂದನಾರ್ಪಣೆ ಮಾಡಿದರು.

ರಾಷ್ಟ್ರೀಯ ವಿರೋಧ ಪಕ್ಷಗಳ ಪ್ರಮುಖ ಪಾತ್ರವನ್ನು ಮರೆಯದಿರಿ

ಜನವರಿ 2 ರಿಂದ 4ರ ವರೆಗೆ ಸಭೆಸೇರಿದ್ದ ಸಿಪಿಐ (ಎಂ)ನ ಆಂಧ್ರ ಪ್ರದೇಶ ರಾಜ್ಯ ಸಮಿತಿಯ ಕಾರ್ಯದರ್ಶಿ ಮಂಡಳಿ ತೆಲುಗು ದೇಶಂ ಪಕ್ಷದ ವಾರ್ಷಿಕ ಅಧಿವೇಶನದ ಭಾಷಣಗಳನ್ನು, ನಿರ್ಣಯಗಳನ್ನು ಹಾಗೂ ಠರಾವುಗಳನ್ನು ವಿವರಿಸಿ ಈ ಕೆಳಗಿನ ಹೇಳಿಕೆಯನ್ನು ನೀಡಿದೆ.

ಸಿ.ಐ.ಟಿ (ಎಂ) ರಾಜ್ಯ ಸಮಿತಿ ತೆಲುಗುದೇಶಂನ ವಾರ್ಷಿಕ ಅಧಿವೇಶನದ ಕಾಂಗ್ರೆಸ್ (ಐ) ಸರ್ವಾಧಿಕಾರಿ ಧೋರಣೆಗಳನ್ನು ವಿರೋಧಿಸುವ ರಾಜ್ಯಗಳಿಗೆ ಹೆಚ್ಚು ಅಧಿಕಾರ ನೀಡಬೇಕೆಂಬ ಒತ್ತಾಯವನ್ನು ಪುನರುಚ್ಚರಿಸುವ, ರಾಜೀವ್ ಗಾಂಧಿಯ ಹೊಸ ಆರ್ಥಿಕ ಯೋಜನೆ ಹಾನಿಕಾರಕವೆಂದು ಟೀಕಿಸುವ, ಕಾಂಗ್ರೆಸ್ ಕೃಷಿ ಸುಧಾರಣೆಗಳ ಜೊಳ್ಳುತನವನ್ನು ಬಯಲಿಗೆಳೆಯುವ ನಿರ್ಣಯಗಳು ಮುಂತಾದುವನ್ನು ಸ್ವಾಗತಿಸುತ್ತದೆ

ನಮ್ಮ ಅಸಮಾಧಾನ

ರಾಜಕೀಯ ನಿರ್ಣಯದಲ್ಲಿ ಸೇರಿಸಲ್ಪಟ್ಟ ಕೆಲವು ರಾಜಕೀಯ ಸಂಘಟನಾತ್ಮಕ ಅಂಶಗಳ ಬಗ್ಗೆ ಈ ವಾರ್ಷಿಕ ಅಧಿವೇಶನಗಳಲ್ಲಿ ವ್ಯಕ್ತಗೊಂಡ ಮತ್ತು ಅಧಿವೇಶನ ಸಮಯದಲ್ಲಿ ಕೆಲವು ತೆಲಗು ದೇಶಂ ಮುಖಂಡರ ಭಾಷಣದಿಂದ ಕಂಡುಬಂದ ಕೆಲವು ಪ್ರವೃತ್ತಿಗಳ ಬಗ್ಗೆ ತನ್ನ ಅಸಮಾಧಾನವನ್ನು ವ್ಯಕ್ತಪಡಿಸುತ್ತದೆ. ವಿರೋಧ ಪಕ್ಷಗಳು ರಾಷ್ಟ್ರವಿರೋಧಿ ಶಕ್ತಿಗಳೊಂದಿಗೆ ಕೈಮಿಲಾಯಿಸುತ್ತವೆ ಎಂದು ದೂಷಿಸುವ ರಾಜೀವ್ ಗಾಂಧಿಯವರ ನಿಲುವಿನ ಬಗ್ಗೆ ತೆಲುಗು ದೇಶಂನ ಖಂಡನೆಯನ್ನು ಒಪ್ಪುತ್ತೇವೆ. ಆದರೆ ಎನ್ ಟಿ ರಾಮರಾವ್ ಇತ್ತ ಕೆಲವು ಹೇಳಿಕೆಗಳು ಉದಾಹರಣೆಗೆ ರಾಷ್ಟ್ರೀಯ ರಾಜಕೀಯ ಪಕ್ಷಗಳು ರಾಜ್ಯದ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳುವಲ್ಲಿ ವಿಫಲವಾಗಿದೆಯೆಂಬ, ರಾಜ್ಯ ಆಧಾರಿತ ಪಕ್ಷಗಳಷ್ಟೇ ರಾಜ್ಯಗಳ ಬಗ್ಗೆ ತಮ್ಮ ಕರ್ತವ್ಯ ನಿಭಾಯಿಸಬಲ್ಲವೆಂಬ ಮತ್ತು ಎಲ್ಲಾ ರಾಜ್ಯಗಳ ಜನತೆ ಪ್ರಾದೇಶಿಕ ಪಕ್ಷಗಳತ್ತ ಒಲವು ವ್ಯಕ್ತಪಡಿಸುತ್ತವೆಂಬ ಹೇಳಿಕೆಗಳು ವಾಸ್ತವ ಸಂಗತಿಯಲ್ಲ ಮತ್ತು ರಾಜಕೀಯವಾಗಿ ಹಾನಿಕರ ಎಂದು ರಾಜ್ಯಸಮಿತಿ ಅಭಿಪ್ರಾಯಪಡುತ್ತದೆ

ಇಂತಹ ಭಾಷಣಕಾರರು ಸಿ.ಪಿ.ಐ. (ಎಂ) ನಂತಹ ರಾಷ್ಟ್ರೀಯ ಪಕ್ಷಗಳು ಹಲವು ರಾಜ್ಯಗಳಲ್ಲಿ ಕಾಂಗ್ರೆಸ್ (ಐ) ಯನ್ನು ಸೋಲಿಸಿವೆ ಹಾಗೂ ಪಶ್ಚಿಮ ಬಂಗಾಳ, ತ್ರಿಪುರ ಹಾಗೂ ಈ ಹಿಂದೆ ಕೇರಳದಲ್ಲಿ ಸರಕಾರಗಳ ನೇತೃತ್ವ ವಹಿಸಿವೆಯೆಂಬುದನ್ನು ಗಮನಿಸಲು ವಿಫಲರಾಗುತ್ತಾರೆ. ಅಲ್ಲದೆ ಸಿ ಪಿ ಐ (ಎಂ) ನೇತೃತ್ವದ ಸರಕಾರಗಳು ಆಳುವ ವರ್ಗಗಳ ಪಕ್ಷಗಳ ಧೋರಣೆಗಳಿಗೆ ಪರ್ಯಾಯವಾದ ಧೋರಣೆಗಳನ್ನು ಮುಂದಿಟ್ಟಿವೆ ಹಾಗೂ ಎತ್ತಿಹಿಡಿದಿವೆ ಎಂಬುದನ್ನು ಅರಿತು ಕೊಳ್ಳುವುದರಲ್ಲಿಯೂ ಅವರು ವಿಫಲರಾಗಿದ್ದಾರೆ. ತೆಲುಗು ದೇಶಂ ಪಕ್ಷದ ದೂರದರ್ಶಿತ್ವದ ಈ ಅಭಾವ ಮತ್ತು ಹಾಗೇನೇ ರಾಷ್ಟ್ರ ಆಧಾರಿತ ಪಕ್ಷಗಳ ಬಗ್ಗೆ ಅದರ ತಿರಸ್ಕಾರ ಸಂಪೂರ್ಣವಾಗಿ ತಪ್ಪು ಹಾಗು ಸಂಕುಚಿತ ಬುದ್ಧಿಯಿಂದ ಕೂಡಿದ್ದು ಎಂಬ ಅಂಶ ಇದರಿಂದ ಬಯಲಾಗುತ್ತದೆ.

ತೆಲುಗು ದೇಶಂನ ಸರಕಾರವನ್ನು ಅನ್ಯಾಯದಿಂದ ವಜಾ ಮಾಡಿದಾಗ ಅದನ್ನು ಮತ್ತೆ ಸ್ಥಾಪಿಸುವಲ್ಲಿ ರಾಷ್ಟ್ರೀಯ ಪಕ್ಷಗಳು, ವಿಶೇಷತಃ ಸಿ ಪಿ ಐ (ಎಂ) ದೇಶಾದ್ಯಂತ ನಿರ್ಣಾಯಕ ಪಾತ್ರ ವಹಿಸಿದವು ಎಂಬ ವಾಸ್ತವಾಂಶವನ್ನು ಮರೆಯುವುದು ಅಕ್ಷಮ್ಯ. ದೇಶದ ಕೆಲವು ಭಾಗಗಳಲ್ಲಿ ಸಾಮ್ರಾಜ್ಯಶಾಹೀ ಪಕ್ಷಗಳು ಕೆಲವು ಪ್ರಾದೇಶಿಕ ಪಕ್ಷಗಳಿಗೆ ಪ್ರೋತ್ಸಾಹ ನೀಡುತ್ತಿದೆ, ಇದರಿಂದ ರಾಷ್ಟ್ರೀಯ ರಾಜಕೀಯ ಹಾಗೂ ಸಾಂಸ್ಕೃತಿಕಐಕ್ಯತೆಯ ಬದಲು ರಾಷ್ಟ್ರೀಯ ರಾಜಕೀಯ ಅನೈಕ್ಯತೆ ಹಾಗೂ ವಿಘಟನಾವಾದಿ ವ್ಯಕ್ತಿಗಳಿಗೆ ಪ್ರೋತ್ಸಾಹ ದೊರೆತಂತಾಗುತ್ತದೆ ಎಂಬುದನ್ನು ಅರಿತುಕೊಳ್ಳದಿರುವುದು ಅಪಾಯಕಾರಿ. ಸಿ.ಪಿ.ಐ. (ಎಂ)ಗೆ ಪ್ರಾದೇಶಿಕ ಪಕ್ಷಗಳ ಬಗ್ಗೆ ವೈಷಮ್ಯವಿಲ್ಲ. ಆದರೆ ಸಿ.ಪಿ.ಐ (ಎಂ) ದೇಶವನ್ನು ಛಿದ್ರಗೊಳಿಸಬೇಕೆನ್ನುವ ಸಾಮ್ರಾಜ್ಯಶಾಹಿಯಿಂದ ಅದರ ಏಜೆಂಟರಿಂದ ಪ್ರೇರಣೆ ಪಡೆಯುವ ಸಂಕುಚಿತವಾದವನ್ನು ಬಡಿದೆಬ್ಬಿಸುವ ಪಕ್ಷಗಳಿಗೆಪೂರ್ಣವಾಗಿ ವಿರುದ್ಧವಾಗಿದೆ. ಇಂತಹ ಎಲ್ಲಾ ಶಕ್ತಿಗಳನ್ನು ಅದು ವಿರೋಧಿಸಿಕೊಂಡು ಬಂದಿದೆ. ಮುಂದೆಯೂ ಅದನ್ನು ವಿರೋಧಿಸುತ್ತದೆ.

ವಿರೋಧಪಕ್ಷಗಳ ಶೃಂಗಸಭೆಗಳ ಸರಣಿ

ವಿಜಯವಾಡಾ, ದಿಲ್ಲಿ ಶ್ರೀನಗರ ಹಾಗೂ ಕಲ್ಕತ್ತೆಯಲ್ಲಿ ನಡೆದ ವಿರೋಧ ಪಕ್ಷಗಳ ಸಭೆಗಳ ಪಾತ್ರವನ್ನು ಮರೆಯುವುದು ಕೂಡಾ ತಪ್ಪು. ಪ.ಜಾಬ್ ಒಪ್ಪಂದಕ್ಕೆ ಆಧಾರ ಕಲ್ಪಿಸಿದ್ದು, ರಾಜ್ಯಗಳ ನಿಜವಾದ ಸ್ವಾಯತ್ತತೆಗೆ ಮತ್ತು ನಮ್ಮ ರಾಜಕೀಯ ವ್ಯವಸ್ಥೆಯಲ್ಲಿ ಒಂದು ಒಕ್ಕೂಟ ರಚನೆಯ ಸ್ಥಾಪನೆಗೆ ಹೋರಾಟ ನಡೆಸಿದ್ದು ಮತ್ತು ಸರ್ಕಾರಿಯ ಆಯೋಗವನ್ನು ಚುರುಕುಗೊಳಿಸಲು ಶ್ರಮಿಸಿದ್ದು ವಿರೋಧಪಕ್ಷಗಳ ಈ ಸಭೆಗಳೇ ಎಂಬುದನ್ನು ಮರೆಯಬಾರದು

ಎನ್.ಟಿ ರಾಮರಾವ್ ಕೂಡಾ ಭಾಗವಹಿಸಿದ್ದ ಕಲ್ಕತ್ತಾ ಸಭೆ ಹನ್ನೊಂದು ಅಂಶಗಳ ಒಂದು ಕಾರ್ಯಕ್ರಮವನ್ನು ಅಂಗೀಕರಿಸಿ, ಸಭೆಯಲ್ಲಿ ಭಾಗವಹಿಸಿದ ಪಕ್ಷಗಳಿಗೆ ಆ ಬಗ್ಗೆ ಒಂದು ರಾಷ್ಟ್ರವ್ಯಾಪೀ ಪ್ರಚಾರ-ಪ್ರಕ್ಷೋಭೆ ನಡೆಸಲು ಕರೆನೀಡಿತ್ತು. ಇದನ್ನಾಧರಿಸಿ ಹಲವು ದೇಶವ್ಯಾಪೀ ಕಾರ್ಯಾಚರಣೆಗಳು ನಡೆದವು ಎಂಬುದನ್ನೂ ಇಂತಹ ಕಾರ್ಯಾಚರಣೆಗಳಿಲ್ಲದಿದ್ದರೆ ಮಾರ್ಚ್ 1985 ರ ಚುನಾವಣೆಗಳಲ್ಲಿ ಕಾಂಗ್ರೆಸ್ (ಐ) ಗೆ ದೊಡ್ಡ ಆಘಾತ ನೀಡಿದಂತಹ ಕಾಂಗ್ರೆಸ್ (ಐ] ವಿರೋಧಿ ಅಲೆ ಮೂಡಿ ಬರಲು ಸಾಧ್ಯವಿರಲಿಲ್ಲ ಎಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು

ಇವನ್ನೆಲ್ಲಾ ಕಡೆಗಣಿಸಿ ಕಲ್ಕತ್ತಾ ಸಭೆ ಹಾಗೂ ಅದರ ಹನ್ನೊಂದು ಅಂಶದ ಬೇಡಿಕೆ ಹಳಸಲಾಗಿ ಬಿಟ್ಟವೆಯೆಂಬ ರೀತಿಯಲ್ಲಿ ವರ್ತಿಸುವುದು ಸಂಕುಚಿತ ಬುದ್ಧಿಯಲ್ಲದೆ ಮತ್ತೇನೂ ಅಲ್ಲ. ಕೇಂದ್ರ—ರಾಜ್ಯ ಸಂಬಂಧಗಳಿಗಷ್ಟೇ ಸೀಮಿತಗೊಂಡಿರುವುದರಿಂದ ಕಾಂಗ್ರೆಸ್ ದುರಾಡಳಿತದ ವಿರುದ್ಧ ರಾಷ್ಟ್ರವ್ಯಾಪೀ ಪ್ರಶ್ನೆಗಳನ್ನು ಮತ್ತು ಆಂದೋಲನಗಳನ್ನು ಕಡೆಗಣಿಸಿದಂತಾಗುತ್ತದೆ ಎಂದು ಸಿ ಐ ಟಿ (ಎಂ) ಭಾವಿಸುತ್ತದೆ.

ಆದ್ದರಿಂದ ರಾಷ್ಟ್ರೀಯ ಐಕ್ಯತೆ ಮತ್ತು ಸಮಗ್ರತೆಯನ್ನು ಕಾಪಾಡುವ ಅಪೇಕ್ಷೆ ವ್ಯಕ್ತಪಡಿಸುವ, ಒಂದು ಬಲಿಷ್ಟ ಕೇಂದ್ರ ಹಾಗೂ ಬಲಿಷ್ಠ ರಾಜ್ಯಗಳಿಗಾಗಿ ಒತ್ತಾಯಿಸುವ ತೆಲುಗು ದೇಶಂ ಹೆಚ್ಚೆಚ್ಚಾಗಿ ಎಡ ಪ್ರಜಾಪ್ರಭುತ್ವವಾದಿ ಮತ್ತು ಜಾತ್ಯತೀತ ಪಕ್ಷಗಳೊಂದಿಗೆ ಸೇರಬೇಕಾಗುತ್ತದೆ, ಪ್ರಾದೇಶಿಕ ಪಕ್ಷಗಳ ನೆಪವೊಡ್ಡಿ ಕಾರ್ಯತಃ ವಿಚ್ಛಿದ್ರಕಾರಿಯೆಂದು ಸಿದ್ಧವಾಗುವ ಎಲ್ಲಪಕ್ಷಗಳಬಗ್ಗೆ ಜಾಗರೂಕತೆ ಮತ್ತು ಎಚ್ಚರಿಕೆ ವಹಿಸಬೇಕೆಂದು ಸಿ. ಪಿ ಐ. (ಎಂ) ಬಯಸುತ್ತದೆ.

ಆಂಧ್ರದ ವಿರುದ್ಧ ಕೇಂದ್ರದ ಪಕ್ಷಪಾತ

ಇಂದು ಆಂಧ್ರಪ್ರದೇಶ ಹಲವಾರು ಕ್ಲಿಷ್ಟ ಸಮಸ್ಯೆಗಳನ್ನು ಎದುರಿಸುತ್ತಿದೆ. ಕೇಂದ್ರದ ನಿಲುವು ಪಕ್ಷಪಾತಪೂರ್ಣವಾಗಿದೆ ಹಾಗೂ ಅದು ರಾಜ್ಯಪಟ್ಟಿಯ ವಿಷಯಗಳಲ್ಲಿ ಅತಿಕ್ರಮಣ ಮಾಡುತ್ತಿದೆ ಯಾವುದೇ ಯೋಜನೆಗೆ ಕೇಂದ್ರದ ಒಪ್ಪಿಗೆ ಬರುತ್ತಿಲ್ಲ. ರಾಜ್ಯದಲ್ಲಿ ಯಾವುದೇ ಕೈಗಾರಿಕಾ ಅಭಿವೃದ್ಧಿ ಕೇಂದ್ರಕ್ಕೆ ಇಷ್ಟವಿಲ್ಲ. ರಾಜ್ಯಕ್ಕೆ ಈ ಮಂಜೂರು ಮಾಡಲಾದ ಕೈಗಾರಿಕಾ ಯೋಜನೆಗಳನ್ನು ಬೇರೆ ಸ್ಥಳಗಳಿಗೆ ವರ್ಗಾಯಿಸಲಾಗುತ್ತಿದೆ. ತೆಲುಗು ದೇಶಂ ಪಕ್ಷ ಕೇಂದ್ರದ ಪಕ್ಷಪಾತಪೂರ್ಣ ಧೋರಣೆಯ ವಿರುದ್ಧ ರಾಜ್ಯದ ಎಲ್ಲಾ ಎಡ ಪ್ರಜಾಪ್ರಭುತ್ವ ಹಾಗೂ ಜಾತ್ಯಾತೀತ ಶಕ್ತಿಗಳನ್ನು ಒಟ್ಟುಗೂಡಿಸಬೇಕಾಗಿದೆ, ಜನತೆಯ ಮೇಲೆ ಹೇರುತ್ತಿರುವ ಹೊರೆಯನ್ನು ಅದು ವಾಪಾಸು ಪಡೆಯಬೇಕಾಗಿದೆ ಹಾಗೂ ಎಲ್ಲಾ ವಿರೋಧ ಪಕ್ಷಗಳು ವಿರೋಧಿಸುತ್ತಿರುವರಾಕ್ಷಸೀ ಪೋಲೀಸ್ ಮಸೂದೆಯನ್ನು ವಾಪಾಸು ಪಡೆಯಬೇಕೆಂದು ನಾವು ಅಭಿಪ್ರಾಯಪಡುತ್ತೇವೆ

ರಾಜ್ಯ ಸರಕಾರ ಭೂಸುಧಾರಣಾ ಶಾಸನವನ್ನು ತಿದ್ದುಪಡಿ ಮಾಡಬೇಕಾಗಿದೆ, ಭೂಮಿಯ ಕೋಟಾ ವರ್ಗಾವಣೆಯನ್ನು ತೊಡೆದುಹಾಕಬೇಕಾಗಿದೆ ಹಾಗೂ ಹೆಚ್ಚುವರಿ ಜಮೀನನ್ನು ಬಡವರಿಗೆ ಹಂಚಬೇಕಾಗಿದೆ. ಅದು ಹೆಚ್ಚಿಸಿದ ನೀರಾವರಿ ತೆರಿಗೆಯನ್ನು ಕೈ ಬಿಡಬೇಕು ಹಾಗೂ ಜೀವನದ ಎಲ್ಲಾ ವಲಯಗಳಲ್ಲಿ ಪ್ರಜಾಪ್ರಭುತ್ವವಾದೀ ಆಚರಣೆಯನ್ನು ಪಾಲಿಸಬೇಕು. ತೆಲುಗು ದೇಶಂ ಜನತೆಯಲ್ಲಿ ಹೆಚ್ಚುತ್ತಿರುವ ಅಸಂತೃಪ್ತಿಯನ್ನು ತೊಡೆದುಹಾಕಲು ತಾನು ಒತ್ತಾಯಮಾಡುವಂತೆ ಕೇಂದ್ರ ರಾಜ್ಯ ಸಂಬಂಧಗಳ ಪರಿಷ್ಕರಣಕ್ಕಾಗಿ ಹೋರಾಡುತ್ತಾ, ಕೇಂದ್ರದಿಂದರಾಜ್ಯಕ್ಕೆ ಹೆಚ್ಚು ಧನಬೆಂಬಲ ಪಡೆಯಲು ಪ್ರಯತ್ನಿಸುವ ದಿಕ್ಕಿನಲ್ಲಿ ತೆಲುಗು ದೇಶಂ ಚಲಿಸಬೇಕಾಗಿದೆ.

ತೆಲುಗು ದೇಶಂ ಮುಖಂಡರು ಈ ಎಲ್ಲಾ ಅಂಶಗಳನ್ನು ಗಂಭೀರವಾಗಿ ಪರಿಗಣಿಸಬೇಕೆಂದು ಸಿ ಪಿ ಐ (ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಒತ್ತಾಯಿಸುತ್ತದೆ. ತೆಲುಗು ದೇಶಂ ಅನ್ನು ಸರಕಾರ ನಡೆಸಲು ಚುನಾಯಿಸಿದ ಮತದಾರರ ಆಕಾಂಕ್ಷೆಗಳನ್ನು ನಿರಾಶೆಗೊಳಿಸದಂತೆ ತೆಲುಗು ದೇಶಂ ಪಕ್ಷ ನಡೆದುಕೊಳ್ಳಬೇಕೆಂದು ಸಿ.ಪಿಐ (ಎಂ) ಬಯಸುತ್ತದೆ.

ಫೆಬ್ರವರಿ 26 ರ ಮುಷ್ಕರಕ್ಕೆ ಸಿ. ಐ. ಟಿ. ಯು. ಬೆಂಬಲ

1986 ಜನವರಿ 9 ರಂದು ಕಾ|| ಬಿ. ಟಿ. ರಣದಿವೆಯವರ ಅಧ್ಯಕ್ಷತೆಯಲ್ಲಿ ಜರುಗಿದ ಸಿ. ಐ. ಟಿ. ಯು ಸೆಕ್ರೆಟೇರಿಯೆಟ್ ಸಭೆಯಲ್ಲಿ ಪ್ರಸಕ್ತ ಪರಿಸ್ಥಿತಿಯ ಕುರಿತು ವಿಮರ್ಶಿಸಿದೆ. ಫೆಬ್ರವರಿ 26 ರಂದು ನಡೆಯಲಿರುವ ರಾಜ್ಯ ಸರ್ಕಾರಿ ನೌಕರರ ಒಂದು ದಿನದ ಸಾಂಕೇತಿಕ ಮುಷ್ಕರಕ್ಕೆ ಸಿ. ಐ. ಟಿ. ಯು. ತನ್ನ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದೆ. ಸಾಮೂಹಿಕ ಮತ ಪ್ರದರ್ಶನ, ಧರಣಿ ಇತ್ಯಾದಿಗಳ ಮೂಲಕ ಅಂದು ತನ್ನ ಸೌಹಾರ್ದ ಬೆಂಬಲವನ್ನು ನೀಡಲು ಎಲ್ಲಾ ಕಾರ್ಮಿಕರಿಗೂ ಮತ್ತು ನೌಕರರಿಗೂ ಸಿ. ಐ. ಟಿ ಯು ಕರೆ ನೀಡಿದೆ. ರಾಷ್ಟ್ರೀಯ ಆಂದೋಲನ ಸಮಿತಿಯು (ಎನ್.ಸಿ.ಸಿ) ಈಗಾಗಲೇ ನಿರ್ಧರಿಸಿರುವಂತೆ ಸರ್ವೋಚ್ಚ ನ್ಯಾಯಾಲಯದ 311 (2) ಎ. ಬಿ. ಸಿ ವಿಧಿಯ ಕುರಿತ ತೀರ್ಮಾನದ ಬಗ್ಗೆ ವಿಚಾರಸಂಕಿರಣವನ್ನು ಶೀಘ್ರವಾಗಿ ಏರ್ಪಡಿಸುವುದರ ಮೂಲಕ ಒಂದು ದಿನದ ಸಾಂಕೇತಿಕ ಮುಷ್ಕರದ ಯಶಸ್ಸಿಗೆ ಸಹಕರಿಸಲು ವಿನಂತಿಸಲಾಗಿದೆ.

ಅಸಂಘಟಿತ ಕಾರ್ಮಿಕರ ಚಿಂತಾಜನಕ ಜೀವನ ಸ್ಥಿತಿಗೆ ಕಾರಣಕರ್ತರಾದ ಅಧಿಕಾರಶಾಹಿ ಮತ್ತು ಕಾಂಗ್ರೆಸ್(ಐ) ಸರ್ಕಾರದ ಪಟ್ಟಭದ್ರಹಿತಾಸಕ್ತಿಯನ್ನು ಮುಚ್ಚಿಟ್ಟು ಸಂಘಟಿತ ಕಾರ್ಮಿಕ ಚಳುವಳಿಯ ಮೇಲೆ ಧಾಳಿ ನಡೆಸಲು ಪ್ರಧಾನಮಂತ್ರಿಯವರು ಕಾಂಗ್ರೆಸ್ ಶತಾಬ್ಧಿ ವೇದಿಕೆಯನ್ನು ಬಳಸಿಕೊಂಡಿದ್ದಾರೆಂದು ಸೆಕ್ರೆಟಾರಿಯೇಟ್ ಸಭೆಯು ಗಮನಿಸಿದೆ. ಸಂಘಟಿತ ಕಾರ್ಮಿಕ ವರ್ಗದ ವಿರುದ್ಧ ಅಸಂಘಟಿತ ಕಾರ್ಮಿಕರನ್ನು ಎತ್ತಿಕಟ್ಟುವ ಪಿತೂರಿಯನ್ನು ಬಯಲುಮಾಡಲು “ದಿ ವರ್ಕಿಂಗ್ ಕ್ಲಾಸ್” ಪತ್ರಿಕೆಯಲ್ಲಿ ಲೇಖನವನ್ನು ಪ್ರಕಟಿಸಲು ಸಹ ನಿರ್ಧರಿಸಲಾಗಿದೆ.

ಸರ್ಕಾರದ ನೀತಿಯಲ್ಲಿನ ಇತ್ತೀಚಿಗಿನ ಪ್ರತಿಗಾಮಿ ತಿರುವನ್ನು ವಿಮರ್ಶಿಸಲು ಮತ್ತು ಕಾರ್ಮಿಕ ವರ್ಗವನ್ನು ದೀರ್ಘಕಾಲದ ಸಂಯಮಶೀಲ ಹೋರಾಟಕ್ಕೆ ಸಜ್ಜುಗೊಳಿಸಲು ರಾಷ್ಟ್ರೀಯ ಆಂದೋಲನ ಸಮಿತಿಯು ಮತ್ತೊಂದು ಸಮಾವೇಶವನ್ನು ನಡೆಸುವುದು ಅತ್ಯವಶ್ಯಕವಾಗಿದೆಯೆಂದು ಸೆಕ್ರಟಾರಿಯೆಟ್ ಅಭಿಪ್ರಾಯ ಪಟ್ಟಿದೆ.

ಮುಂಬರುವ ಮೇ ದಿನಾಚರಣೆಯನ್ನು ಚಿಕಾಗೋ ಸ್ಮರಣಾರ್ಥ ಶತಾಬ್ಧಿಯನ್ನಾಗಿ ಆಚರಿಸಲು ಸೆಕ್ರಟಾರಿಯೇಟ್ ನಿರ್ಧರಿಸಿದೆ. ಮುಂದಿನ ಮೇ ದಿನದಂದು ಕಾರ್ಮಿಕರ ಬೃಹತ್ ರ್‍ಯಾಲಿಗಳ ಪೂರಕವಾಗಿ ಏಪ್ರಿಲ್ ಅಂತ್ಯದ ಏಳು ದಿನಗಳ ಕಾಲ ಸಿದ್ಧತಾ ಕಾರ್ಯಕ್ರಮಗಳನ್ನು ರೂಪಿಸಬೇಕೆಂದು ತೀರ್ಮಾನಿಸಲಾಗಿದೆ. ಈ ಸಂದರ್ಭದಲ್ಲಿ ಒಂದು ಸೂಕ್ತ ನಿರ್ಣಯವನ್ನು ಅಂಗೀಕರಿಸಬೇಕಾಗಿದ್ದು ಈ ನಿರ್ಣಯದ ಆಧಾರದಲ್ಲಿ ಸಮದೃಷ್ಟಿಕೋನವುಳ್ಳ ಕಾರ್ಮಿಕ ಸಂಘಟನೆಗಳೊಂದಿಗೆ ಮೇ ದಿನವನ್ನು ಸಂಯುಕ್ತವಾಗಿ ಆಚರಿಸುವ ಬಗ್ಗೆ ರಾಜ್ಯ ಸಮಿತಿಗಳೇ ನಿರ್ಧಾರ ಕೈಗೊಳ್ಳಬಹುದಾಗಿದೆ.

ಆರ್ಥಿಕ ಸಮೀಕ್ಷೆ :

ಆರ್. ಚಂದ್ರ

ಏಳನೇ ಪಂಚವಾರ್ಷಿಕ ಯೋಜನೆ...3

ಖಾಸಗೀ ರಂಗದ ಪರ ಹೊಸ ತಿರುವು

ಏಳನೇ ಪಂಚವಾರ್ಷಿಕ ಯೋಜನೆಯಲ್ಲಿ ಸಾರ್ವಜನಿಕ ಕ್ಷೇತ್ರದ ವೆಚ್ಚಕ್ಕೆ ವಿದೇಶಿ ನೆರವು, ರಫ್ತುಗಳಿಗೆ, ಸಾರ್ವಜನಿಕರಂಗದ ಲಾಭ, ಅಪ್ರತ್ಯಕ್ಷ ತೆರಿಗೆ ವಿಧಾನಗಳಿಂದ ಸಂಪನ್ಮೂಲ ಪಡೆಯುವುದು ಎಷ್ಟು ಅನಿಶ್ಚಿತ ಎಂದು ಹಿಂದಿನ ಲೇಖನದಲ್ಲಿ ನೋಡಿದೆವು ಇದರಿಂದಾಗಿ ಅಂತಿಮವಾಗಿ ಯೋಜನಾ ವೆಚ್ಚಕ್ಕೆ ಕೊರತೆ ಹಣ ಸೃಷ್ಟಿಯ ವೈಜ್ಞಾನಿಕ ವಿಧಾನಕ್ಕೇ ಶರಣು ಹೋಗುವುದು ಅನಿವಾರ್ಯವಾಗಿ, ಯೋಜನಾ ವೆಚ್ಚ ಹೆಚ್ಚಾಗಿ, ಒಟ್ಟು ಮೊತ್ತದ ನಿಜ ಮೌಲ್ಯವು ಕಡಿಮೆಯಾಗಿ, ಯೋಜನೆಗೇ ವಿರಾಮ ನೀಡುವ ದುಃಸ್ಥಿತಿಯ ಕುರಿತು ಹಿಂದಿನ ಲೇಖನದಲ್ಲಿ ಚರ್ಚಿಸಲಾಗಿದೆ ಸಂಪನ್ಮೂಲದ ಕೊರತೆಯಿಂದ ಏಳನೇ ಯೋಜನೆಯಲ್ಲಿ ವಾರ್ಷಿಕ ಯೋಜನಾ ವೆಚ್ಚವು 6ನೇ ಯೋಜನೆಯ ಕೊನೆಯ ವರ್ಷವಾದ 1984-85 ರ ವೆಚ್ಚಕ್ಕಿಂತ ಹೆಚ್ಚಾಗಲಾರದು ಎಂದು ಡಾ|| ಕಾರ್ತಿಕ್‌ರಾಯ್ ತಮ್ಮ ಲೇಖನ ಒಂದರಲ್ಲಿ ವಿಶ್ಲೇಷಿಸಿದ್ದಾರೆ. (ಪಿ. ಡಿ. 3.11-85] ಇದೇ ಕಾರಣದಿಂದ, ಹೊಸ ಯೋಜನೆಯಲ್ಲಿ ಸಾರ್ವಜನಿಕ ರಂಗದ ಬದಲು ಖಾಸಗೀ ರಂಗಕ್ಕೆ ಹೆಚ್ಚು ಆದ್ಯತೆ ನೀಡುವ ಹೊಸ ತಿರುವನ್ನು ಈ ಲೇಖನದಲ್ಲಿ ವಿಶ್ಲೇಷಿಸಲಾಗಿದೆ.

ಖಾಸಗೀರಂಗದ ಪರ ಹೊಸ ತಿರುವು

ಏಳನೇ ಯೋಜನೆಯ ಒಟ್ಟುಮೊತ್ತ ರೂ. 3,48.148 ಕೋಟಿ ಅದರಲ್ಲಿ ರೂ. 1 80000ಕೋಟಿ ಸಾರ್ವಜನಿಕ ಕ್ಷೇತ್ರಕ್ಕೆ. ಈ ಮೊತ್ತದಲ್ಲಿ ರೂ 28,782 ಕೋಟಿ ಈಗಿರುವ ಅಭಿವೃದ್ಧಿ ಯೋಜನೆಗಳಿಗಾಗಿ ಮೀಸಲು. ಸಾರ್ವಜನಿಕ ಕ್ಷೇತ್ರದಲ್ಲಿ ಹೊಸ ಬಂಡವಾಳ ಹೂಡುವಿಕೆ ರೂ. 1,54,2 8 ಕೋಟಿ, ಖಾಸಗೀ ಕ್ಷೇತ್ರದಲ್ಲಿ ರೂ. 1,68,148 ಕೋಟಿ. ಅಂದರೆ ಯೋಜನೆಯ ನಿವ್ವಳ ಮೊತ್ತ ರೂ. 3,22,366 ಕೋಟಿಯಲ್ಲಿ, ಸಾರ್ವಜನಿಕ ಕ್ಷೇತ್ರದ ಪಾಲು ಕೇವಲ ಶೇ. 47.8, ಖಾಸಗೀ ಕ್ಷೇತ್ರದ ಪಾಲು ಶೇ. 52.2. ಯೋಜನೆ ಪ್ರಾರಂಭವಾದಂದಿನಿಂದ ಲೆಕ್ಕಾಚಾರದರೂ ಸಾರ್ವಜನಿಕ ಕ್ಷೇತ್ರದಲ್ಲಿ ಖಾಸಗೀ ಕ್ಷೇತ್ರಕ್ಕಿಂತ ಹೆಚ್ಚು ಬಂಡವಾಳಹೂಡಲಾಗುತ್ತಿತ್ತು. ಆದರೆ, ಕಾಲಕ್ರಮೇಣ ಖಾಸಗೀ ಕ್ಷೇತ್ರದ ಪಾಲು ಹೆಚ್ಚುತ್ತಾ ಬಂದು ಏಳನೇ ಯೋಜನೆಯಲ್ಲಿ ಅರ್ಧಾಂಶಕ್ಕಿಂತಲೂ ಮೀರಿ ಮೊತ್ತಮೊದಲು ತನ್ನ ಮೇಲುಗೈ ಪಡೆಯಿತು!

ಸಾರ್ವಜನಿಕ ಕ್ಷೇತ್ರದ ಪಾಲು ಮೂರನೇ ಯೋಜನೆಯಿಂದ ಕಡಿಮೆಯಾಗುತ್ತಾ ಬಂದಿದೆ. 3ನೇ ಯೋಜನೆ 63.7%, 4 ನೇ ಯೋಜನೆ 60.3%, 5ನೇ ಯೋಜನೆ 57 6%, 6 ನೇ ಯೋಜನೆ 52.9% 7 ನೇ ಯೋಜನೆ 47.8%. ಅಂದರೆ, ಮೊದಲನೇ ಸ್ಥಾನದಿಂದ ಮೊತ್ತ ಮೊದಲು ಎರಡನೇ ಸ್ಥಾನಕ್ಕೆ ಕುಸಿದಿದೆ ! ಇದುವರೆಗೆ ಸಾರ್ವಜನಿಕ ಕ್ಷೇತ್ರದ ಬೆಂಬಲದಿಂದ ಬೆಳೆದು ಬಂದ ಖಾಸಗಿ ಕ್ಷೇತ್ರ ಇಂದು ಸರಕಾರಕ್ಕೇ ಸವಾಲಾಗಿ ನಿಂತಿದೆ ಆರ್ಥಿಕ ಅಭಿವೃದ್ಧಿಯಲ್ಲಿ ತನ್ನ ಮೇಲುಗೈ ಸಾಧಿಸಿದೆ !

ಅಲ್ಪ ಪ್ರಮಾಣದ ಸಾರ್ವಜನಿಕ ಕ್ಷೇತ್ರದಲ್ಲಿಯೂ, ಹೊಸ ಯೋಜನೆಯಲ್ಲಿ ಕೇಂದ್ರದಪಾಲು ರೂ. 95534 ಕೋಟಿ- ಶೇ. 53, ರಾಜ್ಯಗಳ ಪಾಲು ರೂ. 84466 ಕೋಟಿ ಶೇ 47. 6 ನೇ ಯೋಜನೆಯಲ್ಲಿ ಕೇಂದ್ರ ಮತ್ತು ರಾಜ್ಯಗಳ ಪಾಲು ಅನುಕ್ರಮವಾಗಿ 48.46ಮತ್ತು ಶೇ 51.54 ಆಗಿತ್ತು. ಸಾರ್ವಜನಿಕ ಕ್ಷೇತ್ರದಲ್ಲಿ ಅತಿಕೇಂದ್ರೀಕರಣ, ಖಾಸಗೀ ಕ್ಷೇತ್ರದಲ್ಲಿ ಲೈಸೆನ್ಸ್, ನಿಯಂತ್ರಣಗಳ ಸಡಿಲು ಧೋರಣೆ ಎಂತಹ ವಿಪರ್ಯಾಸ ! ಇದನ್ನು ಯಾರಾದರೂ ಯೋಜನೆ ಎನ್ನಬಹುದೇ? ಈ ಯೋಜನಾರಹಿತ ಯೋಜನೆಯಲ್ಲಿ ಬಂಡವಾಳಶಾಹಿ ಪರವಾಗಿ ಖಾಸಗೀ ರಂಗದ ಪರವಾಗಿ ಹೊಸ ತಿರುವು ಕೊಟ್ಟಿರುವುದನ್ನು ಅನೇಕ ಗಣ್ಯರ ಹೇಳಿಕೆಗಳಿಂದ ಗುರುತಿಸಬಹುದು ಉದಾಹರಣೆಗೆ :—

ಇ. ಎಂ. ಎಸ್. ನಂಬೂದರಿಪಾದ್

ಪ್ರಧಾನಕಾರ್ಯದರ್ಶಿ ಸಿ.ಪಿ.ಐ (ಎಂ) "ಉತ್ಪಾದನೆಯ ಘಟಕಗಳನ್ನು ಎಲ್ಲಿ ಸ್ಥಾಪಿಸಬೇಕು ಯಾವ ಸಾಮಗ್ರಿಗಳನ್ನು ಉತ್ಪಾದಿಸಬೇಕು, ಅವುಗಳನ್ನು ಎಷ್ಟು ಬೆಲೆಗೆ ಮಾರಬೇಕು, ಇತ್ಯಾದಿ ವಿಷಯಗಳನ್ನು ಮುಂದಿನ ವರ್ಷಗಳಲ್ಲಿ ಖಾಸಗೀ ರಂಗದ ಒಡೆಯರೇ ಹೆಚ್ಚಾಗಿ ನಿರ್ಧರಿಸುವರು. ಅಗ ಯೋಜನೆಗೆ ಪೂರ್ಣ ವಿರಾಮ ಹಾಕಿದಂತೆಯೇ ಸರಿ"(ಪಿ ಡಿ.29-9-85)

ಜ್ಯೋತಿಬಸು –

ಮುಖ್ಯಮಂತ್ರಿ, ಪ. ಬಂಗಾಳ : "ಮೂವತ್ತೈದು ವರ್ಷಗಳ ಆರ್ಥಿಕ ಯೋಜನೆಯ ಪ್ರತಿಫಲ – ಕುಸಿಯುತ್ತಿರುವ ರಾಷ್ಟ್ರೀಯ ಸರಾಸರಿ ಉತ್ಪಾದನೆ, ಆದಾಯ ಮತ್ತು ಜೀವನಾವಶ್ಯಕ ವಸ್ತುಗಳ ಬಳಕೆ, ಹೆಚ್ಚುತ್ತಿರುವ ನಿರುದ್ಯೋಗ ಮತ್ತು ಬಡತನ. ಆದರೆ ಪರಿಹಾರ : ವಿಶ್ವ ಬ್ಯಾಂಕ್, ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಗಳು ನಿರ್ದೇಶಿಸಿದ ರಫ್ತು ಆಧರಿತ ಆರ್ಥಿಕ ಅಭಿವೃದ್ಧಿ, ಉದಾರ ಆಮದು ನೀತಿ, ಭೋಗ ವಸ್ತುಗಳ ಆಧಾರದಲ್ಲಿ ಆಂತರಿಕ ಮಾರುಕಟ್ಟೆಯ ವಿಸ್ತರಣೆ ಮತ್ತು ಖಾಸಗೀ ರಂಗದ ಮೇಲಿನ ಸಡಿಲು ನಿಯಂತ್ರಣ."

(ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯಲ್ಲಿ ಭಾಷಣ, ಪಿ ಡಿ. 17-11-85)

ನೃಪೇನ್ ಚಕ್ರವರ್ತಿ

ಮುಖ್ಯಮಂತ್ರಿ ತ್ರಿಪುರಾ: "ಬಡವರ ಮತ್ತು ಶ್ರೀಮಂತರ ಮಧ್ಯೆ ಅಗಾಧ ಅಂತರದ ಕುರಿತು ಏಳನೇ ಯೋಜನೆ ಮೌನವಾಗಿದೆ. ಹಿಂದೆ ಮಹಲ ನೋಟೀಸ್ ಸಮಿತಿ ನೂರು ಗುತ್ತೇದಾರಿ ಕುಟುಂಬಗಳನ್ನು ಗುರುತಿಸಿ, ದೇಶದ ಹೆಚ್ಚಿನ ಸಂಪತ್ತನ್ನ ಕಬಳಿಸುತ್ತಿರುವ ಬಗ್ಗೆ ಎಚ್ಚರಿಸಿತ್ತು, ಆದರೆ, ಇಂದು ಏಳನೇ ಯೋಜನೆಯಲ್ಲಿ ಈ ಕೊಬ್ಬಿದ ಕುಟುಂಬಗಳಿಗೇ ಹೆಚ್ಚು ಲಾಭ ಗಳಿಸಲು ಪ್ರೋತ್ಸಾಹಿಸಲಾಗಿದೆ! (ರಾಷ್ಟ್ರೀಯ ಅಭಿವೃದ್ಧಿಮಂಡಳಿಯಲ್ಲಿ ಭಾಷಣ: ಪಿ. ಡಿ. 17—11—85)

ರಾಮಕೃಷ್ಣ ಹೆಗ್ಗಡೆ –

"6 ಯೋಜನೆಯು 'ಬಡವರ' ಮತ್ತು 'ಶ್ರೀಮಂತರ' ಎರಡು ಭಾರತಗಳನ್ನು ಬಳುವಳಿಯಾಗಿ ಬಿಟ್ಟು ಹೋಗಿದೆ. ಇವುಗಳ ಮೇಲೆಯೇ 21 ನೇ ಶತಮಾನಕ್ಕೆ ನೆಗೆಯುವ ಹೈಟೆಕ್ನಾಲಜಿ ಆರ್ಥಿಕ ಅಭಿವೃದ್ಧಿಯ ಮಾರ್ಗ ಅರ್ಥರಹಿತ.ಯೋಜನೆಯು ಮುಂದಿನ ನೂರು ಕೋಟಿ ಜನಸಮುದಾಯದ ಪರವಾಗಿದ್ದು ಬಡತನ, ನಿರುದ್ಯೋಗ, ನಿರಕ್ಷರತೆಗಳನ್ನು ಹೋಗಲಾಡಿಸಲು ಒತ್ತು ನೀಡಬೇಕು ಈ ದಿಸೆಯಲ್ಲಿ ಕರ್ನಾಟಕದಲ್ಲಿ ವಿಜಯನಗರ ಉಕ್ಕು ಸ್ಥಾವರ ತೈಲಶುದ್ಧೀಕರಣ ಇತ್ಯಾದಿ, ಭಾರಿ ಉದ್ಯಮಗಳನ್ನು ಸ್ಥಾಪಿಸಬೇಕು." (ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯಲ್ಲಿ ಭಾಷಣ : ಇಂಡಿಯನ್ ಎಕ್ಸ್‌ಪ್ರೆಸ್ 9—11—85)

ವಿ. ಎಂ. ತಾರ್ಕುಂಡೆ –

ಪ್ರಜಾಪ್ರಭುತ್ವಕ್ಕಾಗಿ ನಾಗರಿಕ ವೇದಿಕೆಯ ಮುಖ್ಯಸ್ಥ :

"ರಾಜೀವಗಾಂಧಿಯ ಹೊಸ ಆರ್ಥಿಕ ಧೋರಣೆಯು ಬಂಡವಾಳಶಾಹಿ ಪರವಾಗಿದೆ. ಅದರಿಂದ ದೇಶದ ಶೇ 85 ರಷ್ಟು ಜನರಿಗೆ ಪ್ರಯೋಜನ ಆಗಲಾರದು ದೀರ್ಘಕಾಲದ ದೃಷ್ಟಿಯಿಂದ ಹೇಳುವುದಾದರೆ, ಸದ್ಯದಲ್ಲಿಯೇ ಸರಕಾರ ಬಡವರನ್ನು ದಮನಿಸುವ ತಮ್ಮ ಆರ್ಥಿಕ ನೀತಿಯನ್ನು ಬದಲಾಯಿಸಬೇಕಾದೀತು ಅಥವಾ, ಬಡವರನ್ನು ನಿಯಂತ್ರಿಸಲು ಸರಕಾರವೇ ಸರ್ವಾಧಿಕಾರಕ್ಕೆ ಪರಿವರ್ತನೆಗೊಳ್ಳಬೇಕಾದೀತು (ಸಂಡೆ ಅಬ್ಸರ್‌ವರ್ ಸಂದರ್ಶನ : 10—11—85)

ನೃಪೇನ್ ಬಂಡೋಪಾಧ್ಯಾಯ

ಸಮಾಜ ವಿಜ್ಞಾನಿಗಳ ಅಧ್ಯಯನ ಕೇಂದ್ರ, ಕಲ್ಕತ್ತ : "ನೆಹರು ಮಹಲ ನೋಟೀಸ್ ಕಾಲದ ಯೋಜನೆಯ ಪ್ರಾರಂಭದ ವರ್ಷಗಳಲ್ಲಿ ಕೃಷಿಪ್ರಧಾನವಾದ ಭಾರತದ ಆರ್ಥಿಕ ವ್ಯವಸ್ಥೆಯ ಮೇಲೆ ಸಾರ್ವಜನಿಕ ಕ್ಷೇತ್ರದ ಆಶ್ರಯದಲ್ಲಿ ಬೃಹತ್ ಉದ್ಯಮಗಳ ಸೌಧವೇರಿಸುವ 'ವರ್ಗ ಹೋರಾಟ ರಹಿತ' ಮಿಶ್ರ ಆರ್ಥಿಕ ನೀತಿಯು ಸಮಾಜವಾದಿ ಮಾದರಿ ಸಮಾಜ ಸ್ಥಾಪಿಸುವ ಗುರಿಯಾಗಿತ್ತು.

ಆದರೆ, ಕಾಲಕ್ರಮೇಣ ಆಚರಣೆಯಲ್ಲಿ ಸ್ವಾತಂತ್ರ್ಯಪೂರ್ವದ ಖಾಸಗೀ ರಂಗ ಪ್ರಧಾನವಾದ, ಸಾರ್ವಜನಿಕ ರಂಗ ಮತ್ತು ಅದಕ್ಕೆ ಪೂರಕವಾದ ವಿಶ್ವೇಶ್ವರಯ್ಯನವರ ನೇತೃತ್ವದಲ್ಲಿ ದೇಶದ ಗುತ್ತೇದಾರಿ ಬಂಡವಾಳ ಶಾಹಿಗಳು ರಚಿಸಿದ 'ಮುಂಬೈ ಯೋಜನೆಯ' ಬಂಡವಾಳಶಾಹಿ ಮಾರ್ಗದಲ್ಲಿಯೇ ದೇಶದ ಆರ್ಥಿಕ ಅಭಿವೃದ್ಧಿ ಮುಂದುವರಿದು, ಸಮಾಜವಾದದಿಂದ ಬಹಳ ದೂರ ಸರಿಯಿತು. ಬಡವರ ಶೋಷಣೆಯಿಂದ, ಸರಕಾರದ ಸಹಾಯದಿಂದ ಬೆಳೆದುಬಂದ ಖಾಸಗೀರಂಗ ಇಂದು ಸರಕಾರಕ್ಕೇ ಸವಾಲಾಗಿ ತನ್ನ ಮೇಲುಗೈ ಸಾಧಿಸುತ್ತಿದೆ (ಮಾಸ್ಕೋ ವಿಚಾರ ಸಂಕಿರಣದಲ್ಲಿ ಮಂಡಿಸಿದ ಪ್ರಬಂಧ, ಇಂಡಿಯನ್ ಎಕ್ಸ್‌ಪ್ರೆಸ್ : 24-11-85)

ತೆರಿಗೆ ರಿಯಾಯತಿ ಲೆಸೆನ್ಸ್ ರದ್ದತಿ :

ಏಳನೇ ಯೋಜನೆಯ ಮೊದಲ ವರ್ಷದ ಪ್ರಾರಂಭದಿಂದಲೇ ಖಾಸಗೀ ರಂಗದ, ಮುಖ್ಯವಾಗಿ ಗುತ್ತೇದಾರಿ ಕೈಗಾರಿಕೋದ್ಯಮಗಳಿಗೆ ವಿಶೇಷ ಸಹಾಯ ಸೌಲಭ್ಯಗಳನ್ನು ಘೋಷಿಸಲಾಯಿತು ಕಂಪನಿಗಳ ಆದಾಯ ತೆರಿಗೆಯಲ್ಲಿ ಗಣನೀಯ ಕಡಿತ ಮಾಡಲಾಯಿತು ಇದುವರೆಗೆ ರೂ 20 ಕೋಟಿಗಿಂತ ಹೆಚ್ಚು ಆಸ್ತಿ ಮೌಲ್ಯ ಇರುವ ಕೈಗಾರಿಕಾ ಸಂಸ್ಥೆಗಳನ್ನು ಏಕಸ್ವಾಮ್ಯ(MRTP)ನಿಯಂತ್ರಣಾ ಕಾಯಿದೆಗೆ ಒಳಪಡಿಸಲಾಗಿತ್ತು. ಹೊಸ ಧೋರಣೆಯಲ್ಲಿ ರೂ 100 ಕೋಟಿಗೂ ಹೆಚ್ಚಿನ ಆಸ್ತಿಮೌಲ್ಯವಿರುವ ಕೈಗಾರಿಕೆ ಸಂಸ್ಥೆಗಳನ್ನು ಮಾತ್ರ ಏಕಸ್ವಾಮ್ಯ ಎಂದು ಗುರುತಿಸಲಾಗುವುದು ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಇದುವರೆಗೆ ಮೀಸಲಾಗಿರುವ ಅನೇಕ ಕ್ಷೇತ್ರಗಳನ್ನು ಈಗ ಬೃಹತ್ ಖಾಸಗೀ ಉದ್ಯಮರಂಗಕ್ಕೆ ತೆರೆದಿಡಲಾಗಿದೆ 22 ಕೈಗಾರಿಕೆಗಳಿಗೆ ಲೈಸೆನ್ಸ್ ಪದ್ಧತಿಯನ್ನು ರದ್ದುಗೊಳಿಸಲಾಗಿದೆ. ಏಕಸ್ವಾಮ್ಯ ಸಂಸ್ಥೆಗಳಿಗೆ ಧನಸಹಾಯ, ವಿದೇಶೀ ವಿನಿಮಯ ನೆರವು, ಹಾಗೂ ಸಹಭಾಗ, ಆಮದು ಸೌಲಭ್ಯ, ರಫ್ತು ಪ್ರೋತ್ಸಾಹ, ಅತ್ಯಾಧುನಿಕ ತಾಂತ್ರಿಕ ನೆರವು, ಇತ್ಯಾದಿಗಳನ್ನು ಆದ್ಯತೆಯಿಂದ ಉದಾರವಾಗಿ ಒದಗಿಸಲು ನಿರ್ಧರಿಸಲಾಗಿದೆ

ಖಾಸಗೀ ರಂಗದ ಪರವಾಗಿ ಉದಾರ ನೀತಿ ನಿರಂತರವಾಗಿ ಮುಂದುವರಿಯುತ್ತಿದೆ. ದೀರ್ಘಕಾಲದ ಹಣಕಾಸು ನೀತಿಯ ನೆಪದಲ್ಲಿ ಇತ್ತೀಚೆಗೆ ವಿತ್ತ ಮಂತ್ರಿ ವಿ. ಪಿ ಸಿಂಘ್‌ರ ಘೋಷಣೆಯಂತೆ, ಖಾಸಗೀ ರಂಗದ ಕೈಗಾರಿಕಾ ಸಂಸ್ಥೆಗಳ ಆದಾಯದ ಮೇಲೆ ಮುಂದಿನ 5 ವರ್ಷಗಳಲ್ಲಿ ತೆರಿಗೆ ಹೆಚ್ಚಿಸಲಾಗುವುದಿಲ್ಲ. ಅವುಗಳು ಬೇಕಾದಷ್ಟು ಲಾಭಗಳಿಸಬಹುದು. ಲಾಭ ಗಳಿಕೆಯ ಹೆಚ್ಚಿನ ಪಾಲನ್ನು ಹೊಸ ಬಂಡವಾಳ ಹೂಡುವಿಕೆಯಲ್ಲಿ ತೊಡಗಿಸುವುದು ಎಂಬ ಆಶಯ ಇದುವರೆಗೆ ಲಾಭ ಗಳಿಕೆಯ ಬಹುಪಾಲು ಕಪ್ಪು ಹಣವಾಗಿ ಕಳ್ಳಸಂತೆಯಲ್ಲಿ ಹರಿದುಹೋಗುವ ಮಾರುಕಟ್ಟೆಯ ಪೈಪೋಟಿಯಲ್ಲಿ ಏಕಸ್ವಾಮ್ಯ ಸ್ಥಾಪಿಸುವ ಭೋಗ ಜೀವನಕ್ಕೆ ರಾಜಕೀಯ ವರ್ಚಸ್ಸಿಗೆ ಬಳಸುವ ಅನುಭವಗಳೇ ಹೆಚ್ಚು. ಈ ಸಂಸ್ಕೃತಿ ಬದಲಾದೀತೆ ?

ಡಿಸೆಂಬರ್ 25ರಂದು, ಕ್ರಿಸ್‌ಮಸ್ ಕೊಡುಗೆಯಾಗಿ, ಖಾಸಗೀ ರಂಗದ ಬೃಹತ್ ಸಂಸ್ಥೆಗಳಿಗೆ ಇನ್ನಷ್ಟು ರಿಯಾಯಿತಿಗಳನ್ನು ಘೋಷಿಸಲಾಗಿದೆ. "ಏಕಸ್ವಾಮ್ಯ ಮತ್ತು ವಿದೇಶಿ ವಿನಿಮಯ ಕಾಯಿದೆಗಳಿಗೆ" (MRTP& FERA) ಒಳಪಟ್ಟ ಬೃಹತ್ ಸಂಸ್ಥೆಗಳಿಗೆ 17 ಕೈಗಾರಿಕೆಗಳನ್ನು ತೆರೆದಿಡಲಾಯಿತು. ಇದುವರೆಗೆ ಈ ಕೈಗಾರಿಕೆಗಳು ಹೆಚ್ಚಾಗಿ ಸಣ್ಣ ಮತ್ತು ಮಧ್ಯಮ ಘಟಕಗಳಿಗೆ ಮೀಸಲಾಗಿದ್ದವು. ಈಗ ರೂ 100 ಕೋಟಿಗೂ ಹೆಚ್ಚು ಆಸ್ತಿಮೌಲ್ಯವಿರುವ ಬೃಹತ್ ಏಕಸ್ವಾಮ್ಯ ಕೈಗಾರಿಕೆಗಳೂ ಈ ಕ್ಷೇತ್ರಗಳಲ್ಲಿ ಪ್ರವೇಶಿಸಬಹುದು. ಈ ವರ್ಷದ ಪ್ರಾರಂಭದಲ್ಲಿ ಲೈಸೆನ್ಸ್ ಪದ್ಧತಿ ರದ್ದುಗೊಳಿಸಿದ 22 ಕೈಗಾರಿಕೆಗಳಲ್ಲಿ, ಇನ್ನು ಮುಂದೆ ಈ ಬೃಹತ್ ಸಂಸ್ಥೆಗಳೂ ಅನಿರ್ಬಂಧಿತ ಮೊತ್ತದ ಬಂಡವಾಳ ಹೂಡಬಹುದು.. ಲೈಸೆನ್ಸ್ ಮತ್ತು ಬಂಡವಾಳ ಹೂಡುವಿಕೆಯ ನಿಯಂತ್ರಣಗಳಿಗೆ ಒಳಗಾದ ಕೈಗಾರಿಕೆಗಳಲ್ಲಿಯೂ, ಅಧಿಕೃತವಾಗಿ ಹೆಚ್ಚಿಸಿದ ಉತ್ಪಾದನಾ ಸಾಮರ್ಥ್ಯದ ಅರ್ಧಾಂಶದವರೆಗೆ ಹೆಚ್ಚಿನ ಪರವಾನಗಿ ಇಲ್ಲದೆ ಸರಕಾರ ಸಿಂಧುಗೊಳಿಸುವುದು ನವೀಕರಣ, ಆಧುನೀಕರಣ, ಯಂತ್ರೋಪಕರಣಗಳ ಬದಲಾವಣೆ, ಇತ್ಯಾದಿ ಕಾರಣಗಳನ್ನು ಮುಂದೊಡ್ಡಿ ಪಡೆಯಲು ಅನಧಿಕೃತವಾಗಿ ಹೆಚ್ಚಿಸಿದ

(7ನೇ ಪುಟ ನೋಡಿ)

‘ಐಕ್ಯರಂಗ ನಿಧಿ’ ಸಂಗ್ರಹ

ನಮ್ಮ ಸಂಗಾತಿಗಳು "ಐಕ್ಯರಂಗ ನಿಧಿ"ಯನ್ನು ಸಂಗ್ರಹಿಸಿದ ಪ್ರಗತಿಯನ್ನು ಐಕ್ಯರಂಗದ ಈ ಕಾಲಂ ಮೂಲಕ ಓದುಗರಿಗೆ ವರದಿ ಮಾಡುತ್ತೇವೆ.

ಪಿ. ರಾಮಚಂದ್ರರಾವ್‌ರವರ ಮೂಲಕ

ಪ್ರಕಾಶ್ ಬೀಡಿಸ್‌ರವರ ಜಾಹಿರಾತು	ರೂ.	3000
ಅಜ್ಞಾತವಾಗಿರಬಯಸಿದ ದಾನಿಗಳಿಂದ		1000
—— " ——		500

ಎನ್. ಕೆ. ಉಪಾಧ್ಯಾಯರ ಮೂಲಕ

ಬಾಗಲಕೋಟೆ ಉದ್ಯೋಗ್		1500
ಕಾಬ್ರಾ, ಬಾಗಲಕೋಟೆ		100
ಬಡ್‌ಜಾತೆ, ಬಾಗಲ ಕೋಟೆ		100
ಟೆಕ್ನೊಮ್ಯಾಟಿಕ್ಸ್, ಬಿಜಾಪುರ		250
ಗೆಳೆಯರಿಂದ,	"	1000
ವೆಂಕಟೇಶ್ವರ ಎಣ್ಣೆ ಕಾರ್ಖಾನೆ,	ಬಿಜಾಪುರ	100
ನಾಗರಾಣ ಮತ್ತು ಕಂಪನಿ,	"	200
ರೋಶನ್ ಬೇಕರಿ	"	100
ಎಸ್. ಡಿ ಅಕ್ಕಿ, ವಕೀಲರು	"	100
ರಜಿಯಾಬೇಗಂ, ಶಿಕ್ಷಕರು	"	100
ಅಮೀರ್ ಟಾಕೀಸ್	"	100
ಫುಣೇಕರ ಶಿಕ್ಷಣ ಸಂಸ್ಥೆ	"	250
ಕೌತಾಳ, ಕಂಟ್ರಾಕ್ಟರ್	"	100
ಅಶೋಕ	"	100
ನಗರ ಸಭೆ ನೌಕರರು ಇಂಡಿ,	"	100
ಕುರ್ಕಿ, ನಿವೃತ್ತ ನೌಕರ	"	10
ಚೆನ್ನಪ್ಪ	"	10
ಪಿ. ಎಸ್. ಪಾಟೀಲ ವಕೀಲರು	"	10
ಶೆಟ್ಟಿ	"	10
ಅಂಬಾಲಾಲ್	"	10
ಶ್ರೀನಿವಾಸರಾವ್,	ಬಿಜಾಪುರ	50-00
ತೋಶ್ನಿವಾಲ್	"	50-00
ಡೆಕ್ಕನ್ ಕೋ-ಬ್ಯಾಂಕ್	"	50-00
ಕರ್ನಾಟಕ ಜನ್ನಿಂಗ ಕಾರ್ಖಾನೆ,	"	50-00
ದೇವಗಾಂವಕರ	"	150-00
ಚೌಧರಿ, ಪ್ರಾಧ್ಯಾಪಕರು	"	25-00
ಪೂಜಾರ, ವ್ಯಾಪಾರಿ	"	25-00
ಹಾಲಭಾವಿ	"	25-00
ಗೋಡ್‌ಬೋಲೆ, ವಕೀಲರು	"	25-00
ನಾಗರಾಜ ಸಿಂಗ್,	ಬಾಗಲಕೋಟೆ	25-00
ಶೆಟ್ಟಿ,	ಬಿಜಾಪುರ	25-00
ವಸಂಜೀ	"	25-00
ಬಸವ ಪ್ರಭು	"	25-00
ಮುಕಾನ್‌ದಾರ	"	25-00
ಡಿ. ಕೆ. ಕೃಷ್ಣ	ಬೆಂಗಳೂರು	25-00
ಒಟ್ಟು —		9350-00

ಬೀಡಿ ಕಾರ್ಮಿಕರ ಹೋರಾಟದ ಮುಕ್ತಾಯ

ದಿನಾಂಕ 21-12-85 ರಂದು ಕರ್ನಾಟಕ ರಾಜ್ಯ ಬೀಡಿ ಕಾರ್ಮಿಕರ ಫೆಡರೇಷನ್ ಮತ್ತು ಕರ್ನಾಟಕ ಬೀಡಿ ಕೈಗಾರಿಕಾ ಸಂಘದ ನಡುವೆ ಮಂಗಳೂರಿನಲ್ಲಿ ಕಾರ್ಮಿಕರ ಬೇಡಿಕೆಗಳ ಬಗ್ಗೆ ಮಾತುಕತೆ ನಡೆದು ಪ್ರತಿ ಸಾವಿರ ಬೀಡಿ ಕಟ್ಟುವುದಕ್ಕೆ 80 ಪೈಸೆಗಳ ಮಧ್ಯಂತರ ವೇತನ ಏರಿಕೆ ಸಾಧ್ಯವಾಗಿದೆ. ಈ ಒಪ್ಪಂದದ ಹಿನ್ನೆಲೆಯಲ್ಲಿ ಬೀಡಿ ಕಾರ್ಮಿಕರ 13 ದಿನಗಳ ಅನಿರ್ದಿಷ್ಟ ಕಾಲದ ಮುಷ್ಕರವನ್ನು ಹಿಂತೆಗೆದುಕೊಳ್ಳಲಾಗಿದೆ.

ಕರ್ನಾಟಕ ರಾಜ್ಯ ಬೀಡಿ ಫೆಡರೇಷನ್ ಪ್ರಧಾನ ಕಾರ್ಯದರ್ಶಿ ಮಹಮದ್ ದಸ್ತಗೀರ್‌ರವರು ಪತ್ರಿಕಾ ಹೇಳಿಕೆ ನೀಡಿ ಹಿಂದೆ ನಡೆಸಿದ ಮುಷ್ಕರಗಳಿಗಿಂತ ದೀರ್ಘ ಕಾಲ ನಡೆದು ಅತಿ ಹೆಚ್ಚು ಕಾರ್ಮಿಕರನ್ನು ಒಳಗೊಂಡು ಈ ಮುಷ್ಕರವನ್ನು ಯಶಸ್ವಿ ಮಾಡಿದ ಕಾರ್ಮಿಕಸಮುದಾಯಕ್ಕೆ ರಾಜ್ಯ ಬೀಡಿ ಫೆಡರೇಷನ್ ಪರವಾಗಿ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

ಕಾ|| ಮುಹಮ್ಮದ್ ದಸ್ತಗೀರ್‌ರವರು, ದ. ಕ. ಬೀಡಿ ಫೆಡರೇಷನ್ ಕಾರ್ಯದರ್ಶಿ ಯು ಬಿ. ಲೋಕಯ್ಯನವರು ವಿವಿಧ ಕಡೆಗಳಲ್ಲಿ ಪ್ರವಾಸ ಮಾಡಿ ದೀರ್ಘ ಕಾಲ ಹೋರಾಟ ಮಾಡಿದ ಕಾರ್ಮಿಕರನ್ನು ಅಭಿನಂದಿಸಿದರು.

ಬೆಂಗಳೂರು

ದಿ. 22-12-86 ರಂದು ಬೆಂಗಳೂರಿನ ಜ್ಯೋತಿ ಹೋಂ ಇಂಡಸ್ಟ್ರೀಸ್‌ನ ಮುಂದೆ ಧರಣಿ ಕುಳಿತಿದ್ದ ಜಾಗಕ್ಕೆ ತೆರಳಿ ಪಿ. ರಾಮಚಂದ್ರರಾವ್, ಮಹಮ್ಮದ್ ದಸ್ತಗೀರ್ ಹಾಗೂ ಕಾ|| ಆರ್. ಶ್ರೀನಿವಾಸ್‌ರವರು ಕಾರ್ಮಿಕರನ್ನುದ್ದೇಶಿಸಿ ಮಾತನಾಡಿ, ಕಾರ್ಮಿಕರ ಬೇಡಿಕೆಗಳ ಬಗ್ಗೆ ನಡೆದ ಒಪ್ಪಂದವನ್ನು ವಿವರಿಸಿದರು. ಕಾರ್ಮಿಕರು ಈ ಒಪ್ಪಂದವನ್ನು ಸಂತೋಷದಿಂದ ಸ್ವಾಗತಿಸಿ ಮುಷ್ಕರವನ್ನು ಮುಕ್ತಾಯಗೊಳಿಸಿದರು

ಕುಣಿಗಲ್

ದಿನಾಂಕ 12.12.85 ರಂದು ಸುಮಾರು ಐನೂರು ಬೀಡಿ ಕಾರ್ಮಿಕರು ಕಾ|| ಬಡೇಸಾಬ್‌ರವರ ನೇತೃತ್ವದಲ್ಲಿ ಮೆರವಣಿಗೆ ಹೊರಟು ಗಣೇಶ್ ಬೀಡಿಯ ಅಂಗಸಂಸ್ಥೆಯಾದ ಜ್ಯೋತಿ ಇಂಡಸ್ಟ್ರೀಸ್ ಬೀಡಿ ಕಾರ್ಖಾನೆಗೆ ತೆರಳಿ ಅನಿರ್ದಿಷ್ಟ ಉಪವಾಸ ಮುಷ್ಕರವನ್ನು ಪ್ರಾರಂಭಿಸಿದರು. ಸಭೆಯನ್ನುದ್ದೇಶಿಸಿ ಬಡೇಸಾಬ್, ಅಂಜನಪ್ಪನವರು ಮಾತನಾಡಿದರು.

ದಿನಾಂಕ 20.12.85 ರಂದು ಸಚಿವ ವೈ. ಕೆ. ರಾಮಯ್ಯ ಮತ್ತು ಶಾಸಕ ಡಿ ನಾಗರಾಜಯ್ಯ, ಪುರಸಭೆ ಅಧ್ಯಕ್ಷ ಮರಿಯಪ್ಪನವರು ಮುಷ್ಕರದ ಸ್ಥಳಕ್ಕೆ ಭೇಟಿ ನೀಡಿದ್ದರು ಬೀಡಿ ಫೆಡರೇಷನ್‌ನ ರಾಜ್ಯ ಸಮಿತಿಯ ಕರೆಯ ಮೇರೆಗೆ ದಿನಾಂಕ 23 12.85 ರಂದು ಬೆಳಗ್ಗೆ ಕಾರ್ಮಿಕರ ಭಾರಿ ಮೆರವಣಿಗೆ ನಡೆಸಿ ಮುಷ್ಕರವನ್ನು ಹಿಂತೆಗೆದುಕೊಳ್ಳಲಾಯಿತು.

ಪುತ್ತೂರು

ಪುತ್ತೂರು ತಾಲೂಕು ಬೀಡಿ ಕೆಲಸಗಾರರಸಂಘದ ನೇತೃತ್ವದಲ್ಲಿ ಪುತ್ತೂರು ಮತ್ತು ಉಪ್ಪಿನಂಗಡಿಯ ಡಿಪೋಗಳು ಬಂದಾಗಿದ್ದವು. ದಿನಾಂಕ 12.12.85 ರಂದು ಪ್ರಾರಂಭವಾದ ಬೀಡಿ ಕಾರ್ಮಿಕರ ಸತ್ಯಾಗ್ರಹದ ನೇತೃತ್ವವನ್ನು ಬಿ. ರಾಮಕೃಷ್ಣಪ್ಪ, ಅಣ್ಣು, ಶಿವಪ್ಪ ಗೌಡರವರು ವಹಿಸಿದ್ದು ಪುತ್ತೂರು ನಗರದಲ್ಲಿ ನೂರಾರು ಬೀಡಿ ಕಾರ್ಮಿಕರ ಮೆರವಣಿಗೆ ನಡೆಸಲಾಯಿತು. 18 12 85 ರಂದು ಪುತ್ತೂರಿಗೆ ಆಗಮಿಸಿದ ಸಚಿವ ಪಿ ಜಿ ಆರ್. ಸಿಂಧ್ಯಾರವರಿಗೆ ಕಾರ್ಮಿಕರು ಮೆರವಣಿಗೆಯಲ್ಲಿ ತೆರಳಿ ಮನವಿಯನ್ನು ಅರ್ಪಿಸಿದರು. 21.12.85 ರಂದು ನೆಹರೂ ನಗರದಲ್ಲಿ ಬಹಿರಂಗ ಸಭೆ ನಡೆಸಲಾಯಿತು

ವಾಮಂಜೂರು

ವಾಮಂಜೂರು ಪ್ರಾದೇಶಿಕ ಬೀಡಿ ಕೆಲಸಗಾರರ ಸಂಘದ ಆಶ್ರಯದಲ್ಲಿ 22 12 85 ರಂದು ಬೀಡಿ ಕೆಲಸಗಾರರ ಸಾರ್ವಜನಿಕರ ಸಭೆ ನಡೆಯಿತು ಈ ಸಭೆಯಲ್ಲಿ 400 ಜನ ಮಹಿಳಾ ಕಾರ್ಮಿಕರು ಭಾಗವಹಿಸಿದರು.

ಕೆ ಮುಂಡಪ್ಪ, ಕೆ. ಗಂಗಯ್ಯನವರು ಮಾತನಾಡಿ 12ರಂದು ಕಿನ್ನಿಕಂಬಳ ಟೆಲಿಫೋನ್ ಬೀಡಿ ಡಿಪೋದ ಮುಂದೆ ನಡೆಸಿದ ಮುಷ್ಕರದಲ್ಲಿ ಭಾಗವಹಿಸಿದವರಿಗೆ ವಂದನೆ ಸಲ್ಲಿಸಿದರು.

ಬಂಟ್ವಾಳ

ದಿನಾಂಕ 21.12.85 ರಂದು ಬಂಟ್ವಾಳ ತಾಲೂಕಿನ ಶಂಭೂರು ಗ್ರಾಮದಲ್ಲಿ ನಡೆದ ಪ್ರಸಾರ ಸಭೆಯಲ್ಲಿ ಬಿ ವಾಸುಗಟ್ಟಿ, ಮೋನಪ್ಪ ಸಪಲಿಯವರು ಬೀಡಿ ಒಪ್ಪಂದವನ್ನು ಸ್ವಾಗತಿಸಿದರು ಕಾರ್ಯದರ್ಶಿ ಬಿ. ನಾರಾಯಣ ಸ್ವಾಗತಿಸಿದರು

ಕಾಪು

ಕಾಪು ಪ್ರದೇಶ ಬೀಡಿ ಕಾರ್ಮಿಕರ ಮಹಾಸಭೆಯು 1.1.86 ರಂದು ಉಡುಪಿ ತಾಲೂಕು ರೈತ ಸಂಘದ ಕಾರ್ಯದರ್ಶಿ ಕಾ. ಡೇವಿಡ್ ಕರ್ಕಡರ ಅಧ್ಯಕ್ಷತೆಯಲ್ಲಿ ಜರುಗಿತು. ಕಾ ಮೂಸಬ್ಬ ಸಭೆಯನ್ನು ಉದ್ಘಾಟಿಸಿದರು. ಸಭೆಯನ್ನುದ್ದೇಶಿಸಿ ಕಾ. ಲೋಕಯ್ಯ ಮಾತನಾಡಿದರು. ಪ್ರಾರಂಭದಲ್ಲಿ ಕಾ ರಾಮ. ಕೆ. ಕುಂದರ್ ಸ್ವಾಗತಿಸಿದರು.

ಕುಪ್ಪೆಪದವು

ಕುಪ್ಪೆಪದವು ಪ್ರದೇಶ ಬೀಡಿ ಕೆಲಸಗಾರರ ಸಂಘದ ಸಭೆ ಕಾ. ಆನಂದ ಪೂಜಾರಿ ಅವರ ಅಧ್ಯಕ್ಷತೆಯಲ್ಲಿ ಜರುಗಿತು. ಕಾರ್ಯದರ್ಶಿ. ಲೋಕಯ್ಯನವರು ಸಭೆಯನ್ನುದ್ದೇಶಿಸಿ ಮಾತನಾಡಿ ಕಾ ಬಾಲಕೃಷ್ಣ ಶೆಟ್ಟಿಯವರು ವಂದಿಸದರು.

ಕಾ. ಸೂರಿ ಹಾಗೂ ಸಿ. ನಂಜುಡಪ್ಪನವರ ಪ್ರವಾಸ

ಕಾ. ಸೂರಿ ಹಾಗೂ ಸಿ. ನಂಜುಂಡಪ್ಪನವರು ಕ್ರಮವಾಗಿ ಗುಬ್ಬಿ ತಾಲ್ಲೂಕು ಕುನ್ನಲ, ಶಿರಾ, ಕುಣಿಗಲ್‌ಗಳಲ್ಲಿ ಪ್ರವಾಸ ಮಾಡಿ ಅತ್ಯಂತ ದೀನ ಸ್ಥಿತಿಯಲ್ಲಿರುವ ಬೀಡಿಕಾರ್ಮಿಕರ ಸಂಘಟನೆಯನ್ನು ಬಲಪಡಿಸುವುದರ ಬಗ್ಗೆ ನೂರಾರು ಜನ ಹೆಂಗಸರು ಗಂಡಸರು ನೆರೆದ ಸಭೆಗಳಲ್ಲಿ ಮಾತನಾಡಿದರು.

ರಾಣಿಬೆನ್ನೂರಿನಲ್ಲಿ ನೇಕಾರ ಕಾರ್ಮಿಕರ ಮೇಲೆ ಹಲ್ಲೆ

ರಾಣಿ ಬೆನ್ನೂರಿನಲ್ಲಿ ಬಲಗೊಳ್ಳುತ್ತಿರುವ ನೇಕಾರ ಕಾರ್ಮಿಕರ ಸಂಘಟನೆಯ ಮೇಲೆ ಸ್ಥಾಪಿತ ಹಿತಾಸಕ್ತಿಗಳು ಧಾಳಿ ನಡೆಸುತ್ತಾ, ಕೊಲೆಯ ಬೆದರಿಕೆಗಳನ್ನು ಹಾಕುತ್ತಾ, ಸುಳ್ಳು ಕೊಲೆ ಮೊಕದ್ದಮೆಗಳಲ್ಲಿ ಸಿಕ್ಕಿಹಾಕಿಸಿ ಸಂಘವನ್ನು ಒಡೆಯುವ ಯತ್ನ ಮಾಡುತ್ತಾ ಬಂದಿದ್ದಾರೆ.

ಇತ್ತೀಚೆಗೆ, ಸರಕಾರ ಸಹಾಯಧನದ ಮೇಲೆ ಕೊಡಮಾಡುವ ರಾಟೆಗಳು ಎಲ್ಲಾ ಬಡ ನೇಕಾರರಿಗೂ ಸಿಗಬೇಕೆಂದು ಹೋರಾಡುತ್ತಿರುವ ರಾಣಿ ಬೆನ್ನೂರು ತಾಲೂಕು ನೇಕಾರ ಕಾರ್ಮಿಕರ ಸಂಘದ ಕಾರ್ಮಿಕ ಗಣೇಶಪ್ಪ ದ್ಯಾಮಪ್ಪ ಹಳ್ಯಂಡಿಯ ಮೇಲೆ ಹಲ್ಲೆ ಮಾಡಿದ್ದಾರೆ ಈ ಘಟನೆಯನ್ನು ಸಂಘವು ತೀವ್ರವಾಗಿ ಖಂಡಿಸಿ ಪೋಲಿಸರು ಪಕ್ಷಪಾತವಿಲ್ಲದೆ ವಿಚಾರಣೆ ನಡೆಸಿ ಧಾಳಿಗೆ ಕಾರಣವಾದ ಭರಮಪ್ಪ ಶೇಷಗಿರಿ ಹಾಗೂ ಗುಂಪನ್ನು ಶಿಕ್ಷೆಗೆ ಗುರಿಪಡಿಸಬೇಕೆಂದು ಒತ್ತಾಯಿಸಿದ್ದಾರೆ ●

ನಲ್ವತ್ತು ತುಂಬಿದ ‘ದೇಶಾಭಿಮಾನಿ’

(2ನೇ ಪುಟದಿಂದ)

ಹಕ್ಕುಗಳರಕ್ಷಣೆಗೆ ಅಹರ್ನಿಶಿ ದುಡಿದಿದೆ. ಅದು ಇಂದು ಆಳುವ ವರ್ಗದ ಸಿದ್ಧಾಂತ ಮತ್ತು ರಾಜಕೀಯವನ್ನು ಹರಡುವ ಬೂರ್ಜ್ವಾ ಪತ್ರಿಕೆಗಳೊಂದಿಗೆ ಸೆಣಸುತ್ತಿದೆ. ದೇಶಾಭಿಮಾನಿ ಕೇವಲ ಪಕ್ಷದ ಚಟುವಟಿಕೆಗಳಿಗೆ ಪ್ರಚಾರ ನೀಡದೆ ರಾಷ್ಟ್ರೀಯ, ಅಂತರರಾಷ್ಟ್ರೀಯ ಮತ್ತು ಕೇರಳದ ವಿವಿಧ ಬೆಳವಣಿಗೆಗಳನ್ನು ದುಡಿಯುವ ವರ್ಗ ಮತ್ತು ಕಮ್ಯೂನಿಸ್ಟರ ನಿಲುವಿಗೆ ಅನುಗುಣವಾಗಿ ಸಮಗ್ರವಾಗಿ ವಿವೇಚಿಸುತ್ತಿದೆ.

ಭವಿತವ್ಯದ ಪಾತ್ರ

ಪಕ್ಷವನ್ನು ಕಟ್ಟುವಲ್ಲಿ ದೈನಿಕದ ಪಾತ್ರದ ಬಗ್ಗೆ ಅದರ ಚರಿತ್ರೆಯನ್ನು ನೋಡಿದೆವು. ನಾಲ್ವತ್ತರ ದಶಕದಲ್ಲಿ ಅದರ ಪ್ರಸಾರ ಪಕ್ಷದ ಸದಸ್ಯತ್ವಕ್ಕಿಂತ ಹೆಚ್ಚಿದ್ದು ಪಕ್ಷದ ಸಾಮೂಹಿಕ ಸಂಘಟನೆಗಳಿಗಿಂತ ಹೆಚ್ಚು ಜನರನ್ನು ಮುಟ್ಟುತ್ತಿತ್ತು. ಉದಾಹರಣೆಗೆ 1943 ರಲ್ಲಿ ತಿರುವನಂತಪುರದಲ್ಲಿ ನಿಷೇಧವಿದ್ದರೂ ಅದರ ಪ್ರಸಾರ 5250 ಇದ್ದು ಪಕ್ಷದ ಸದಸ್ಯತ್ವ 3110 ಇದ್ದಿತು ಆದರೆ ಇತ್ತೀಚೆಗೆ ನಡೆದ ಪಕ್ಷದ ರಾಜ್ಯ ಅಧಿವೇಶನದಲ್ಲಿ ಪಕ್ಷದ ಸದಸ್ಯತ್ವಕ್ಕಿಂತ ಕಡಿಮೆ ಪ್ರಸಾರವಿರುವುದನ್ನು ಗಮನಿಸಲಾಯಿತು. ಇದನ್ನು ಸರಿಪಡಿಸಿಕೊಂಡು ಪತ್ರಿಕೆಯ ಪ್ರಸಾರವನ್ನು ಗಣನೀಯವಾಗಿ ಏರಿಸುವುದರ ಮೂಲಕ ನಲ್ವತ್ತನೇ ವಾರ್ಷಿಕೋತ್ಸವ ಆಚರಿಸಲು ಮತ್ತು ತ್ರಿವೇಂದ್ರಂನಿಂದ ಇನ್ನೊಂದು ಆವೃತ್ತಿಯನ್ನು ಹೊರ ತರಲು ನಿರ್ಧರಿಸಲಾಯಿತು.

ನಲ್ವತ್ತನೇ ವಾರ್ಷಿಕೋತ್ಸವದಲ್ಲಿ ದೇಶಾಭಿಮಾನಿಗೆ ಶುಭಾಶಯ ಕೋರುತ್ತ ಅದಕ್ಕಾಗಿ ದುಡಿದ ಎಲ್ಲ ಸಂಪಾದಕರನ್ನು, ಪತ್ರಕರ್ತರನ್ನು, ಪತ್ರಿಕೆಯಲ್ಲಿ ಕೆಲಸ ಮಾಡುವ ಕಾರ್ಮಿಕರನ್ನು ವಂದಿಸೋಣ.

ಬೀಡಿ ಕಾರ್ಮಿಕರ ಹೋರಾಟದ ಬಗ್ಗೆ ಎಐಟಿಯುಸಿ ಯ ದುರುದ್ದೇಶಪೂರಿತ ಅಪಪ್ರಚಾರ — ಸಿ ಐ ಟಿ ಯು ಮಾರುತ್ತರ

ಡಿ 12ರಿಂದ 21ರವರೆಗೆ ರಾಜ್ಯ ಬೀಡಿ ಕಾರ್ಮಿಕರು ನಡೆಸಿದ ಅನಿರ್ದಿಷ್ಟಾವಧಿ ಯಶಸ್ವಿ ಮುಷ್ಕರ ಮತ್ತು ಸಿ.ಐ.ಟಿ ಯು ಮುಖಂಡರು ಎ.ಐ.ಟಿ ಯು ಸಿ. ಮುಖಂಡರಿಗೆ ತಿಳಿಸದೆ ಒಪ್ಪಂದ ಮಾಡಿಕೊಂಡು ಮೋಸ ಮಾಡಿದ್ದಾರೆ, ಮಾಲಿಕರಿಂದ ಲಂಚ ಪಡೆದಿದ್ದಾರೆ, ಹಾಗೂ ಪಕ್ಷದ ಸಮ್ಮೇಳನಕ್ಕೆ ಹೋಗುವ ಗಡಿಬಿಡಿಯಿಂದ ಈ ಒಪ್ಪಂದ ನಡೆಸಿದ್ದಾರೆ ಎಂಬಿತ್ಯಾದಿ ಎ.ಐ.ಟಿ ಯು ಸಿ.ಯು ಆರೋಪಗಳಿಗೆ ಸೌತ್ ಕೆನರಾ ಬೀಡಿ ವರ್ಕರ್ಸ್ ಫೆಡರೇಶನ್ (ಸಿ ಐ.ಟಿ ಯು.) ಕಾರ್ಯದರ್ಶಿಯವರಿಂದ ಸ್ಪಷ್ಟನೆ –

ಕಾರ್ಮಿಕ ಬೇಡಿಕೆಗಳ ಬಗ್ಗೆ ಯಾವತ್ತೂ ಐಕ್ಯ ಹೋರಾಟ ನಡೆಯಬೇಕು. ಜನ ಸಮೂಹವನ್ನು ಸಾಮೂಹಿಕವಾಗಿ ಚಳವಳಿಯಲ್ಲಿ ತೊಡಗಿಸಬೇಕು ಎನ್ನುವುದು ಸಿ ಐ.ಟಿ.ಯು ಧೋರಣೆ.

20 ಶೇಖಡ ಬೊನಸ್ಸ್, ರೂ 15-00 ಮಜೂರಿ (ಸಾವಿರ ಬೀಡಿಗೆ),0-05 ಪೈಸೆ ತುಟ್ಟಿಭತ್ತೆ ಪಾಯಿಂಟಿಗೆ, ಪ್ರಾವಿಡೆಂಟ್ ಫಂಡ್ ಜ್ಯಾರಿ ಮಾಡದ ಮಾಲಿಕರ ವಿರುದ್ಧ ಕ್ರಮ, ಎಲ್ಲಾ ಕಾರ್ಮಿಕರಿಗೆ ಪ್ರಾವಿಡೆಂಟ್ ಫಂಡ್ ರಸೀದಿ, ವಾರದ ಮಜೂರಿಗೆ ವೇಜ್ ಸ್ಲೀಪ್, ವೆಲ್ ಫೇರ್ ಸ್ಕೀಮಿನಿಂದ ಸಿಗಬೇಕಾದ ವಿದ್ಯಾರ್ಥಿ ವೇತನ, ಆಸ್ಪತ್ರೆ, ಔಷಧಿ, ಮನೆ ಮತ್ತಿತರ ಸವಲತ್ತುಗಳನ್ನು ಜಾರಿಗೊಳಿಸುವಿಕೆ. ಕಾನೂನು ಪ್ರಕಾರ ಸಿಗಬೇಕಾದ ಸವಲತ್ತುಗಳು ಕಾರ್ಮಿಕರಿಗೆ ಸಿಗುವಂತೆ ಸರಕಾರ ಮತ್ತು ಮಾಲಿಕರು ಕ್ರಮಕೈಗೊಳ್ಳಬೇಕು ಎಂಬಿತ್ಯಾದಿ ಬೇಡಿಕೆಗಳನ್ನು ಮುಂದಿಟ್ಟು ನವಂಬರ್ 26ಕ್ಕೆ ರಾಜ್ಯಾದಂತ ಅನಿರ್ದಿಷ್ಟಾವಧಿ ಮುಷ್ಕರ ಹೂಡಲು ರಾಜ್ಯ ಬೀಡಿ ಫೆಡರೇಶನ್ ತೀರ್ಮಾನಿಸಿತ್ತು. ಈ ಮಧ್ಯೆ ನವಂಬರ್ 22ರಂದು ಬಸ್ಸು ದರ ಏರಿಕೆ ಹಾಗೂ ಅವಶ್ಯಕ ಸಾಮಗ್ರಿಗಳ ಬೆಲೆ ಏರಿಕೆಯನ್ನು ಪ್ರತಿಭಟಿಸಿ ಕರ್ನಾಟಕ ರಾಜ್ಯ ಬಂದ್ ನಡೆಸಲು ಸಿ ಪಿ ಐ (ಎಂ) ಮತ್ತು ಸಿ.ಐ ಪಿ. ಪಕ್ಷಗಳು ಕರೆ ಕೊಟ್ಟವು. ಈ ಕರೆಯನ್ನು ಯಶಸ್ವಿಗೊಳಿಸಲು ಬೀಡಿ ಕಾರ್ಮಿಕರು ಮಹತ್ವದ ಪಾತ್ರ ವಹಿಸಬೇಕೆನ್ನುವನೆಲೆಯಲ್ಲಿ ನವಂಬರ್ 26ಕ್ಕೆ ನಡೆಸಬೇಕಾದ ಮುಷ್ಕರವನ್ನು ಡಿಸೆಂಬರ್ 12ಕ್ಕೆ ಮುಂದುವರಿಸಲು ರಾಜ್ಯ ಬೀಡಿ ಫೆಡರೇಶನ್ ಸಿ ಐ ಟಿ. ಯು ಕರೆನೀಡಿತು ಈ ವಿಷಯ ಅರಿಯದೆ ಎ ಐ ಟಿ ಯು.ಸಿ. ನೇತೃತ್ವದ ದ.ಕ. ಜಿಲ್ಲಾ ಫೆಡರೇಶನ್ 26ರ ಮುಷ್ಕರಕ್ಕೆ ನಮ್ಮ ಬೆಂಬಲ ಇದೆ. ನಾವೂ ಈ ಹೋರಾಟದಲ್ಲಿ ಸೇರಿಕೊಳ್ಳುತ್ತೇವೆ. ನಿಮ್ಮ ಬೇಡಿಕೆಗಳ ಬಗ್ಗೆ ಕಾರ್ಯಕ್ರಮಗಳ ಬಗ್ಗೆ ನಮಗೆ ತಿಳಿಸಿ ಎಂದು ಸೌತ್ ಕೆನರಾ ಬೀಡಿ ವರ್ಕರ್ಸ್ ಫೆಡರೇಶನ್‌ಗೆ ಪತ್ರ ಬರೆದರು ಈ ಪತ್ರ ಅನುಸರಿಸಿ ದ ಕ. ಜಿಲ್ಲೆಯ ಎ ಐ ಟಿ ಯು ಸಿ. ಮುಖಂಡರನ್ನು ಮುಖತಃ ಕಂಡು ಈ ಹೋರಾಟ ರಾಜ್ಯಾದ್ಯಂತ ನಡೆಯುವವರಿಂದ ರಾಜ್ಯ ಮಟ್ಟದಲ್ಲಿ ಈ ಹೊಂದಾಣಿಕೆ ನಡೆಯಬೇಕೆಂದು ಸಿ ಐ ಟಿ.ಯು. ಪರವಾಗಿ ನಾವು ಅವರಿಗೆ ಅಭಿಪ್ರಾಯ ಕೊಟ್ಟಿದ್ದೇವೆ. ಆದರೆ ರಾಜ್ಯ ಬೀಡಿ ಫೆಡರೇಶನ್ ಇಲ್ಲ ಎನ್ನುವ ಒಂದು ಕಾರಣ ನೀಡಿ ಎ ಐ ಟಿ ಯು ಸಿಗೆ ಶಕ್ತಿ ಇರುವ ದಾವಣಗೆರೆ, ಧಾರವಾಡ, ಜಿಲ್ಲೆಯಲ್ಲಿ ಈ ಹೋರಾಟ ಯಶಸ್ವಿಗೊಳಿಸುವ ಗೋಜಿಗೆ ಹೋಗಲಿಲ್ಲ. ಅಲ್ಲಿ ಮುಷ್ಕರವೂ ನಡೆದಿಲ್ಲ. ದ.ಕ. ಜಿಲ್ಲೆಯಲ್ಲಿ ಎ ಐ ಟಿ ಯು ಸಿಗೆ ಶಕ್ತಿ ಇರುವ ಬಂಟ್ವಾಳ ತಾಲೂಕಿನ ವಿಟ್ಲ ಬೀಡಿ ಡಿಪೊವಲ್ಲಿ ಮುಷ್ಕರ ಆರಂಭವಾದ 2 ದಿನಗಳಲ್ಲಿ ಡಿಪೊ ಬಂದಾಗಲಿಲ್ಲ. ಲಲ್ಲಿನಂತರಸಿಐಟಿಯು ಕಾರ್ಯಕರ್ತರು ಈ ಡಿಪೋವನ್ನು ಬಂದ್ ಮಾಡಲು ಕಾರ್ಯಕ್ರಮ ಹಾಕಬೇಕಾಯಿತು.

ಡಿಸೆಂಬರ್ 17ರಂದು ಕಾರ್ಮಿಕ ಮಂತ್ರಿಗಳು ಕರೆದ ಮಾತುಕತೆಗೆ ಸಿಐಟಿಯು ಎಐಟಿಯುಸಿ. ಯನ್ನು ಕರೆದುಕೊಂಡು ಹೋದದ್ದಲ್ಲ. ಮಾತುಕತೆ ಪ್ರಥಮ ಸುತ್ತಿನಲ್ಲಿ ವಿಫಲವಾದಾಗ ಎ.ಐ ಟಿ ಯು. ಸಿ. ಮುಖಂಡರು ಅಲ್ಲಿಂದ ನೇರ ಹಿಂತೆರಳಿದರು. ಅವರ ರಾಜ್ಯ ಮುಖಂಡತ್ವ ಕಾರ್ಮಿಕ ಮಂತ್ರಿಗಳನ್ನು ಕಂಡು ಈ ಹೋರಾಟವನ್ನು ಕೊನೆಗೊಳಿಸಲು ಒಂದು ಪರಿಹಾರ ಸೂಚಿಸಬೇಕು ಇಲ್ಲದೆ ಹೋದರೆ ಪರಿಸ್ಥಿತಿ ಬಿಗಡಾಯಿಸಿದರೆ ನಾವು ಹೊಣೆಗಾರರಲ್ಲ ಎಂದು ಸರಕಾರವನ್ನು ಎಚ್ಚರಿಸಿದ್ದರೂ ಈ ರೀತಿ ಯಾವೊಂದು ಕೆಲಸ ಮಾಡದೆ, ಬೆಂಗಳೂರಿನಿಂದ ನೇರ ವಾಪಸ್ಸು ಬಂದು ಅಪಪ್ರಚಾರಕ್ಕೆ ತೊಡಗಿದರು ಮುಷ್ಕರ ನಿರತ ಕಾರ್ಮಿಕರ ಕಷ್ಟದಲ್ಲಿ ತನ್ನನ್ನು ತೊಡಗಿಸಿಕೊಳ್ಳದೆ, ಯಾವ ಕಾರ್ಯಕ್ರಮ ಮಾಡದೆ ಕಾರ್ಮಿಕರನ್ನು ಎದುರಿಸಲಾಗದೆ ಮುಷ್ಕರ ಮುಂದುವರಿದಾಗ ನಾವು ಈ ಮುಷ್ಕರ ಮಾಡಿದ್ದಲ್ಲ, ಮುಷ್ಕರಕ್ಕೆ ಕರೆ ಕೊಟ್ಟಿರುವುದು ಸಿಐಟಿಯು. ನಾವು ಈ ಹೋರಾಟಕ್ಕೆ ಬೆಂಬಲ ಮಾತ್ರ ಎಂದು ಪ್ರಚಾರ ಆರಂಭಿಸಿದರು. ಅಲ್ಲದೆ ಈ ಅಭಿಪ್ರಾಯವನ್ನು ಮಾಲಕರಲ್ಲಿಯೂ ಹೇಳಿದ್ದರು. ಮಾಲಿಕರಿಗೆ ಬೇಡಿಕೆ ಪಟ್ಟಿಯನ್ನು ಕೊಟ್ಟದ್ದಿಲ್ಲ. ಒಪ್ಪಂದದ ಸಂಭರ್ದದಲ್ಲಿ ಈ ಎಲ್ಲಾ ಕಾರಣಗಳಿಂದಾಗಿ ಮಾಲಕರು ಎಐಟಿಯುಸಿಯನ್ನು ಆಹ್ವಾನಿಸದೇ ಇರಬಹುದು

ಮಾರ್ಚಿಯಲ್ಲಿ ಸಿಗಬೇಕಾದ ಹೆಚ್ಚು ವರಿ ತುಟ್ಟಿಭತ್ತೆಯನ್ನು ಜನವರಿಯಲ್ಲಿ ಕೊಟ್ಟರೆ ನಾವು ಹೋರಾಟದಿಂದ ಹಿಂತೆಗೆಯುತ್ತೇವೆ ಎನ್ನುವ ಅಭಿಪ್ರಾಯಗಳನ್ನು ಮಾಲಕರ ಮುಂದೆ ಕೊಟ್ಟರು ಮಾರ್ಚಿಯಲ್ಲಿ ಸಿಗಬೇಕಾದ ತುಟ್ಟಿಭತ್ತೆ ಜನವರಿಯಲ್ಲಿ ಪಡೆಯಲು ಈ ಹೋರಾಟದ ಅಗತ್ಯ ಇತ್ತೇ ಎನ್ನುವ ವಿಮರ್ಶೆಯನ್ನು ಎಐಟಿಯುಸಿ ನಾಯಕರು ಮಾಡುವುದು ಒಳಿತು.

17ರ ಮಾತುಕತೆ ವಿಫಲವಾದಾಗ ಹೋರಾಟ ತೀವ್ರಗೊಳಿಸಬೇಕೆನ್ನುವ ಹಾಗೂ ಕಾರ್ಮಿಕ ಮುಖಂಡರು ಅನಿರ್ದಿಷ್ಟ ಅನ್ನ ಸತ್ಯಗ್ರಹ ನಡೆಸಬೇಕೆನ್ನುವ ಸಿಐಟಿಯು ವಿನ ಒಮ್ಮತ ಅಭಿಪ್ರಾಯವನ್ನು ಎಐಟಿಯುಸಿ ಮುಖಂಡರಿಗೆ ತಿಳಿಸಿ ಅವರೂ ಅನಿರ್ದಿಷ್ಟ ಅನ್ನ ಸತ್ಯಾಗ್ರಹ ನಡೆಸಬೇಕೆಂದು ವಿನಂತಿಸಿದಾಗ ಈ ಪ್ರಸ್ತಾಪವನ್ನು ತಳ್ಳಿ ಸರದಿ ಸತ್ಯಾಗ್ರಹ ಮಾತ್ರ ಸಾಕು ಎನ್ನುವ ಅಭಿಪ್ರಾಯ ತಿಳಿಸಿದರು. ಹೋರಾಟವನ್ನು ತೀವ್ರಗೊಳಿಸುವ ಎಐಟಿಯುಸಿ ಕಾರ್ಯವೈಖರಿ ಈ ರೀತಿಯ ಕಾರ್ಯಕ್ರಮದಿಂದ ನಮಗೆ ಅರ್ಥವಾಯಿತು.

ಎಐಟಿಯುಸಿ ಯವರೇ ಹೇಳಿದ್ದಂತೆ ಮುಷ್ಕರಕ್ಕೆ ಕರೆಕೊಟ್ಟದ್ದು ಸಿಐಟಿಯು ನಾವು ಬೆಂಬಲಮಾತ್ರ, ಎನ್ನುವ ಅವರ ಅಭಿಪ್ರಾಯದಂತೆಯೇ ಎಐಟಿಯುಸಿ ಈ ಹೋರಾಟದಲ್ಲಿ ಸ್ಪಂದಿಸಿದೆ. ಹೋರಾಟ ವಿಫಲವಾದರೆ ನಷ್ಟವಿಲ್ಲ ಯಶಸ್ವಿಯಾದರೆ ಸಾಧ್ಯವಾದಷ್ಟು ಲಾಭಪಡೆಯುವ ಎನ್ನುವ ಎಐಟಿಯುಸಿ ತಂತ್ರವನ್ನು ಸಿಐಟಿಯು ಫೆಡರೇಶನ್ ಖಂಡಿಸುತ್ತದೆ.

ಈ ಹಿಂದೆ 82ರ ಪ್ರಾವಿಡೆಂಡ್ ಫಂಡ್ ರಶೀದಿ ಪಡೆಯುವ ಹೋರಾಟ, 1983 ರ ಹೋರಾಟ, 1984 ರ ಹೋರಾಟಗಳ ಸಂದರ್ಭದಲ್ಲಿ ನಾವು ಐಕ್ಯ ಹೋರಾಟಕ್ಕೆ ಎ ಐ ಟಿ ಯು.ಸಿ. ಯನ್ನು ವಿನಂತಿಸಿದರೂ ಅವರು ಹಿಂದೆ ಸರಿದಿದ್ದರು. ಈ ಹೋರಾಟಗಳು ಸಿ ಐ.ಟಿ ಯು ನೇತೃತ್ವದಲ್ಲಿ ಯಶಸ್ವಿಯಾದಾಗ, ಎ.ಐ.ಟಿ.ಯು ಸಿ. ತನ್ನ ಸಣ್ಣ ಸಂಖ್ಯೆಯ ಬೆಂಬಲಿಗರನ್ನು ಸಮಾಧಾನ ಪಡಿಸಲು ಹಾಗೂ ನಾವೇ ಈ ಹೋರಾಟವನ್ನು ನಡೆಸುವುದು ಎನ್ನುವ ಅಭಿಪ್ರಾಯ ಮೂಡಿಸಲು ನೆಪಮಾತ್ರಕ್ಕೆ ಈ ಹೋರಾಟದಲ್ಲಿ ಬೆಂಬಲಿಸಿರುವುದು ಸ್ಪಷ್ಟವಾಗಿದೆ.

ಹೋರಾಟಕ್ಕೆ ಮೊದಲು, ಹೋರಾಟದ ಸಂದರ್ಭದಲ್ಲಿ ಒಂದು ರೀತಿ, ಹೋರಾಟ ಮುಗಿದ ನಂತರ ಒಂದು ರೀತಿಗೆ ಬಣ್ಣ ಬದಲಾಯಿಸುವ ಈ ಗುಣವನ್ನು ಎ ಐ ಟಿ.ಯು ಸಿ. ಇನ್ನಾದರೂ ಸರಿಪಡಿಸಿಕೊಳ್ಳುವುದು ಎನ್ನುವ ಆಶೆ ನಮಗೆ ಇನ್ನೂ ಇದೆ.

ಲಂಚ ಪಡೆದ ಬಗ್ಗೆ ಅವರು ಮಾಡುವ ಆರೋಪಗಳ ಬಗ್ಗೆ ನಾವು ತಿಳಿಸುವುದು ಇಷ್ಟೆ. ನಮ್ಮಲ್ಲಿರುವ ಹಣ, ಆಸ್ತಿ, ಸಂಪತ್ತುಗಳ ಬಗ್ಗೆ, ಮುಂದು ವೆಚ್ಚಗಳ ಬಗ್ಗೆ ಹಾಗೂ ಎ.ಐ ಟಿ ಯು ಸಿ ಯವರ ಖರ್ಚು ವೆಚ್ಚ, ಹಣ ಆಸ್ತಿಗಳ ಬಗ್ಗೆ ಜನತೆಯೇ ವಿಚಾರ ಮಾಡಿ ತೀರ್ಪು ನೀಡಲಿ. ನಾವು ಪಡೆದ ಲಂಚವನ್ನು ಜನತೆಯೇ ಬಹಿರಂಗ ಪಡಿಸಲಿ.

"ಯಾವುದೇ ಮಟ್ಟದ ಪಕ್ಷ ಸಂಯುಕ್ತ ಹೋರಾಟ ಸಮಿತಿ ಆಗಿಲ್ಲ"

(8ನೇ ಪುಟ ನೋಡಿ)

ಖಾಸಗೀ ರಂಗದ ಪರ ಹೊಸ ತಿರುವು

(5ನೇ ಪುಟದಿಂದ)

ಉತ್ಪಾದನಾ ಸಾಮರ್ಥ್ಯವನ್ನು ಸಿಂಧುಗೊಳಿಸುವ ಅವಕಾಶ ಬೃಹತ್ ಸಂಸ್ಥೆಗಳಿಗೂ ತೆರೆದಿದೆ. "ಅವುಗಳು ಮುಕ್ತವಾಗಿಟ್ಟು ಕೈಗಾರಿಕೆಗಳನ್ನು ಹಿಂದುಳಿದ ಪ್ರದೇಶಗಳಲ್ಲಿ ಸ್ಥಾಪಿಸಿದರೆ, ಈ ರಿಯಾಯಿತಿ ಸಿಗುವುದು. ರಫ್ತು ಪ್ರೋತ್ಸಾಹಕ್ಕೆಂದು ಪ್ರಾರಂಭಗೊಂಡ ಈ ರಿಯಾಯಿತಿಯನ್ನು, ರಫ್ತು ಶರತ್ತನ್ನು ಸಡಿಲಗೊಳಿಸಿಯೂ ಮುಂದುವರಿಸಲಾಗಿದೆ.

ಯೋಜನೆ ಎಲ್ಲದೆ ?

ಈಗಾಗಲೇ ವಿವಿಧ ಕೈಗಾರಿಕೆಗಳಲ್ಲಿ 80000ಕ್ಕೂ ಹೆಚ್ಚಿನ ಘಟಕಗಳು (ಮುಖ್ಯವಾಗಿ ಸಣ್ಣ, ಮಧ್ಯಮ)ನಷ್ಟದ ದಾರಿಯಲ್ಲಿದ್ದು. ಲಕ್ಷಾಂತರ ಕಾರ್ಮಿಕರು ನಿರುದ್ಯೋಗಿಗಳಾಗುತ್ತಿದ್ದಾರೆ. ಏಳನೇ ಯೋಜನೆಯು ಈ ಕುರಿತು ಹೆಚ್ಚು ಕಾಳಜಿ ಹೊಂದಿರುವಂತೆ ಕಂಡು ಬರುವುದಿಲ್ಲ. ಆರ್ಥಿಕ ಅಭಿವೃದ್ಧಿಗೆ, ಕೈಗಾರಿಕಾ ಉತ್ಪಾದನೆ ಶೀಘ್ರದಲ್ಲಿ ಹೆಚ್ಚಾಗಬೇಕು ಎಂಬುದೊಂದೇ ಅದರ ಗುರಿ. ಆದಕ್ಕೆ ಸಾರ್ವಜನಿಕ ರಂಗ ವನ್ನು ಹೆಚ್ಚು ಅವಲಂಬಿಸಲು ಸಂಪನ್ಮೂಲದ ಕೊರತೆ, ಆಡಳಿತದ ಅದಕ್ಷತೆ ಮತ್ತು ಪಕ್ಷದ ನೀತಿಗಳು ಹೈಟೆಕ್ನಾಲಜಿ, ಅರ್ಥ ನಿಕರಣ, ರಫ್ತು ಹಿಂದುಳಿದ ಪ್ರದೇಶಗಳ ಅಭಿವೃದ್ಧಿ, ಇತ್ಯಾದಿ ಕಾರಣಗಳನ್ನು ಪಟ್ಟಿ ಮಾಡಿ, ಏಕ ಸ್ವಾಮ್ಯ ಸಂಸ್ಥೆಗಳಿಗೆ ಅನಿರ್ಭಂಧಿತ ಪ್ರೋತ್ಸಾಹಗಳು, ರಿಯಾಯಿತಿಗಳು ಯೋಜನೆಯ ಹೊಸ ಬಂಡವಾಳ ಹೂಡುವಿಕೆಯಲ್ಲಿ ಶೇ 50ಕ್ಕೂ ಹೆಚ್ಚಿನ ಪಾಲು ಪಡೆದಿರುವ ಖಾಸಗೀ ರಂಗ ಎಲ್ಲ ಕೈಗಾರಿಕೆಗಳನ್ನು ಸ್ಥಾಪಿಸಬೇಕು, ಎಷ್ಟು ಬಂಡವಾಳ ಹೂಡಬೇಕು, ಏನು ಉತ್ಪಾದಿಸಬೇಕು, ಎಷ್ಟು ಉತ್ಪಾದಿಸಬೇಕು, ಯಾರಿಗೆ ಮಾರಾಟ ಮಾಡಬೇಕು, ಎಷ್ಟು ಬೆಲೆಗೆ ಮಾರಬೇಕು, ಯಾವ ತಾಂತ್ರಿಕತೆ ಬಳಸಬೇಕು, ಎಷ್ಟು ವಿದೇಶಿ ವಿನಿಮಯಗಳಿಸಬೇಕು ಅಥವಾ ಬಳಸಬೇಕು, ಇತ್ಯಾದಿ ವಿಷಯಗಳಲ್ಲಿ ಯೋಜನಾ ಆಯೋಗ,"ಏಕ ಸ್ವಾಮ್ಯ" ಮತ್ತು "ವಿದೇಶಿ ವಿನಿಮಯ" ನಿಯಂತ್ರಣ ಕಾಯಿದೆಗಳು ಸರಕಾರ ಹಸ್ತಕ್ಷೇಪ ಮಾಡುವಂತಿಲ್ಲ. ಹಾಗಾದರೆ, ಯೋಜನೆ ಎಲ್ಲಿದೆ ?

1966-67ರಿಂದ 1968-69 ರವರೆಗೆ ಮೂರು ವರ್ಷಗಳ ಅವಧಿಯಲ್ಲಿ ಯುದ್ಧ, ಬರಗಾಲ, ಕಾರಣಗಳಿಂದ ಯೋಜನೆಗೆ ಅಧಿಕೃತವಾಗಿ ರಜೆ ಸಾರಬೇಕಾಗಿತ್ತು. ಆದರೆ ಮುಂದಿನ 5 ವರ್ಷಗಳಲ್ಲಿ (1985-90) ಖಾಸಗೀರಂಗದ ಮೇಲ್ಮೈ ಹೊಂದಿದ ಯೋಜನೆಯಲ್ಲಿ ಅನಧಿಕೃತವಾಗಿ ನಿಜವಾದ ಯೋಜನೆಗೆ ರಜೆ ಸಾರಿರುವುದನ್ನು ಮುಖ್ಯವಾಗಿ ಗಮನಿಸಬೇಕು

21ನೇ ಶತಮಾನಕ್ಕೆ, 19ನೇ ಶತಮಾನದ ದಾರಿ !

ಸಂಪನ್ಮೂಲ ಕೊರತೆಯಿಂದಾಗಿ' ಸಾರ್ವಜನಿಕ ರಂಗವು, ಯೋಜನೆಯ ಅವಧಿಯಲ್ಲಿ ಇದುವರೆಗಿನ ಅಭಿವೃದ್ಧಿ ಕಾರ್ಯಗಳನ್ನು ಮುಕ್ತಾಯಗೊಳಿಸುವುದಕ್ಕೇ ಹೆಚ್ಚು ಆದ್ಯತೆ ನೀಡಲಿದೆ ಪರಿಣಾಮವಾಗಿ, ವಿದ್ಯುತ್, ಉಕ್ಕು, ತೈಲ ಕಲ್ಲಿದ್ದಲು, ಗೊಬ್ಬರ, ರೈಲ್ವೆ, ರಸ್ತೆ, ಶಿಕ್ಷಣ ಆರೋಗ್ಯ, ವಸತಿ, ಅಗತ್ಯ ಕ್ಷೇತ್ರಗಳಲ್ಲಿ ಹೊಸ ಅಭಿವೃದ್ಧಿ ಕಾರ್ಯಗಳನ್ನು ಪ್ರಾರಂಭಿಸಲು ಅಸಾಧ್ಯ. ಇದುವರೆಗಿನ ಅನುಭವದಲ್ಲಿ ಸಾರ್ವಜನಿಕ ರಂಗದಲ್ಲಿ ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಂಡಂತೆ, ಅದೇ ಪ್ರಮಾಣದಲ್ಲಿ ಖಾಸಗೀ ರಂಗದ ಅಭಿವೃದ್ಧಿ ಕಾರ್ಯಕ್ರಮಗಳೂ ಕುಂಠಿತವಾಗುವುವು ಮುಂದುವರಿದ ಬಂಡವಾಳಶಾಹಿ ರಾಷ್ಟ್ರಗಳ ಕ್ರಿಯೂ ಖಾಸಗೀ ರಂಗದ ಹಿತದೃಷ್ಟಿಯಿಂದಲೇ ಸಾರ್ವಜನಿಕ ರಂಗದಲ್ಲಿ ಹೆಚ್ಚು ಹೆಚ್ಚು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ. ಆದರೆ, ಅತ್ಯಂತ ಬಡದೇಶವಾದ ಭಾರತದಲ್ಲಿ 21ನೇ ಶತಮಾನಕ್ಕೆ ನೆಗೆಯಲು 19ನೇ ಶತಮಾನದ "ಫ್ರೀ ಎಂಟರ್ ಪ್ರೈಸ್" (free Enterprice) ಅನಿಯಂತ್ರಿತ ಖಾಸಗೀ ರಂಗದ ಮೇಲುಗೈಯ ಬಂಡವಾಳಶಾಹಿ ಪದ್ಧತಿ ಯನ್ನು ಹುರಿದುಂಬಿಸಲಾಗುತ್ತಿದೆ !

ಎಐಟಿಯುಸಿ ಯ ಅಪಪ್ರಚಾರ

(7ನೇ ಪುಟದಿಂದ)

ಎಂಬುದು ಎಲ್ಲರಿಗೂ ತಿಳಿದ ವಿಷಯ ವಷ್ಟೆ. ಎಲ್ಲಿಯೂ ಸಂಯುಕ್ತ ಹೋರಾಟ ಸಮಿತಿ ಇಲ್ಲದಿರುವಾಗ ಯಾರು ಯಾರನ್ನೂ ಆಮಂತ್ರಿಸುವ ಪ್ರಶ್ನೆ ಬರುತ್ತದೆ"

ಬೆಂಗಳೂರಿನಲ್ಲಿ ಸಭೆ ನಡೆದಾಗ ಮಂತ್ರಿಗಳು ಎಲ್ಲರನ್ನು ಕರೆದದ್ದಾಗಿದೆ. ಹಾಗೆಯೇ ಪಂಚಾಯಿತಿ ಮಾಡುವಾಗ ಸಿಐಟಿಯು ನವರು ಎಐಟಿಯುಸಿ ಯವರನ್ನು 'ಆಮಂತ್ರಿಸುವ' ಪ್ರಶ್ನೆ ಎಲ್ಲಿ ಬರುತ್ತದೆ? ಮ್ಯಾನೇಜುಮೆಂಟ ನವರು ಕರೆಯಬೇಕಿತ್ತು.

ಪ್ರಕಾಶ್ ಬೀಡಿ ಮಾಲಕರ ಹೇಳಿಕೆ ಪ್ರಕಾರ "ಎಐಟಿಯುಸಿ ಮುಖಂಡರನ್ನು ಅವರು ಆಮಂತ್ರಿಸಿದ್ದರಂತೆ" ಆದರೂ ಎಐಟಿಯುಸಿ ಬರಲಿಲ್ಲ.

ಹಿಂದೆ ಟೈಲ್ ವರ್ಕರ್ಸ್ ಹೋರಾಟದ ಸಂದರ್ಭದಲ್ಲಿ, 53 ದಿನ ಹೋರಾಟ ಮಾಡಿ, ಕೊನೆ ಗಳಿಗೆಯಲ್ಲಿ ಮಾತುಕತೆ ವೇಳೆಯಲ್ಲಿ "ಬೇಕು ಬೇಕೆಂತಲೇ" ಹೊರ ಬಂದು ಎಐಟಿಯುಸಿಯ ಇದೇ ಮುಖಂಡರು ಸಿಐಟಿಯು ನ್ನು ಅವಹೇಳನ ಮಾಡಿದ್ದಾರೆ.

....ಎಂದು ಅವರೇ ಅಪಪ್ರಚಾರ ಮಾಡಿದ್ದರು. "ಸಿಐಟಿಯು ಮುಖಂಡರು ಹೇಳುವಂತೆ ಮಂತ್ರಿ ಅಜೀಜ್ ಶೇಟರು ತುಟ್ಟಿಭತ್ಯೆ ಸೇರಿಸುವ ಕನಿಷ್ಠ ಕೂಲಿಯನ್ನು 3 ತಿಂಗಳೊಳಗೆ ನಿಶ್ಚಯಿಸುತ್ತಾರೆ" ಎಂದು ಭರವಸೆ ಕೊಟ್ಟಿದ್ದಾರೆ ಎಂಬ ಹೇಳಿಕೆ ಸತ್ಯಕ್ಕೆ ದೂರ ಎಂದು ಹೇಳಿದ್ದರು. ಆದರೆ ಇದೇ ತಾ. 26.1.86 ರಂದು ಅವರು ದ. ಕ. ಜಿಲ್ಲಾ ಹಂಚಿನ ಕೆಲಸಗಾರರು ಪ್ರಕಟಿಸಿದ ಕರಪತ್ರದಲ್ಲಿ "ಅಜೀಜ್ ಶೇಟರು ಆ ರೀತಿ ಭರವಸೆ ಕೊಟ್ಟಿದ್ದರು" ಎಂದು ಒಪ್ಪಿಕೊಂಡಿದ್ದಾರೆ.

....ಹಿಂದೆ ಬೀಡಿ ಕೆಲಸಗಾರರ ಕಾನೂನು ಸವಲತ್ತುಗಳನ್ನು ಅನುಷ್ಠಾನ ಮಾಡುವ "ಒಪ್ಪಂದ" ಮಾಡಿಕೊಂಡ ವೇಳೆಯೂ (ತಾ 21.7.74 ರಲ್ಲಿ) ಇದೇ ರೀತಿ ಅಪಪ್ರಚಾರವನ್ನು ಸಿಐಟಿಯು ಮುಖಂಡರ ಮೇಲೆ ಮಾಡಿದ್ದರು. ಆ ನಂತರ ಒಂದೇ ವರ್ಷದಲ್ಲಿ "ನಾವು ಆ ಒಪ್ಪಂದವನ್ನು ವಿರೋಧಿಸಿದುದು ತಪ್ಪಾಯಿತು" ಎಂದು ಅವರೇ ಹೇಳಿಕೆಯನ್ನಿತ್ತರು.

ಫೆಬ್ರವರಿ 17 ರಂದು ರಾಜ್ಯವ್ಯಾಪಿ ಪ್ರತಿಭಟನೆ

(1ನೇ ಪುಟದಿಂದ)

ರಂದು ರಾಜ್ಯವ್ಯಾಪಿಯಾಗಿ ಸಭೆ, ಮೆರವಣಿಗೆಗಳ ಮೂಲಕ ಪ್ರತಿಭಟನಾ ಪ್ರದರ್ಶನಗಳನ್ನು ಏರ್ಪಡಿಸಬೇಕೆಂದು ಕರೆ ನೀಡಿದೆ ಒಂದೇ ದಿನದಲ್ಲಿ ಬೆಂಗಳೂರಿನಲ್ಲಿ ನೂರು ಜನರ ಪಂಜಿನ ಮೆರವಣಿಗೆಯನ್ನು ಮಾಡಿ ಕೆಲವು ಘಟಕಗಳು ಪ್ರತಿಭಟನೆ ಸೂಚಿಸಿವೆ. ಇದು ಮುಂದೆ ಬರಲಿರುವ ತೀವ್ರ ಹೋರಾಟಕ್ಕೆ ಮುನ್ಸೂಚನೆಯೆಂಬಂತಿದೆ.

ಜೊತೆಗೆ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಜನತಾ ಪಕ್ಷ ಹಾಗೂ ಸಿ.ಪಿ.ಐ ಗಳೊಡನೆ ಸಮಾಲೋಚಿಸಿ "ಕರ್ನಾಟಕ ಬಂದ್" ಕಾರ್ಯಕ್ರಮವನ್ನು ಕೈಗೊಳ್ಳಲು ಪ್ರಯತ್ನ ನಡೆಸಿ, ಎಲ್ಲ ಪ್ರಜಾಸತ್ತಾತ್ಮಕ ಶಕ್ತಿಗಳು ಈ ಕ್ರಮಕ್ಕೆ ಬೆಂಬಲವೀಯ ಬೇಕೆಂದು ಕರೆ ನೀಡಿದೆ.

ಸಂಗಾತಿಗಳೇ,

ಕೇವಲ ಒಂದು ವರ್ಷದ ಹಿಂದೆ 85-86ರ ಬಜೆಟ್‌ನಲ್ಲಿ 1400 ಕೋಟಿ ರೂ ತೆರಿಗೆ, ದರ ಏರಿಕೆಗಳನ್ನು ಈಗಾಗಲೇ ಸಂಕಷ್ಟದಲ್ಲಿ ಸಿಕ್ಕಿರುವ ಜನತೆಯ ಮೇಲೆ ಹೇರಿದ, ಬಂಡವಾಳಶಾಹಿ ವರ್ಗಗಳಿಗೆ 1000 ಕೋಟಿ ರೂಗಳಷ್ಟು ರಿಯಾಯತಿಯನ್ನು ಲೀಲಾಜಾಲವಾಗಿ ನೀಡಿದ, ಇನ್ನೂ ದಿನಂಪ್ರತಿ ಈ ಶ್ರೀಮಂತರಿಗೆ ಅನುಕೂಲಗಳ ಸುರಿಮಳೆಯನ್ನೇ ಸುರಿಸಿರುವ 30 ರಿಂದ ನಲವತ್ತು ಸಾವಿರ ಕೋಟಿ ಕಪ್ಪು ಹಣದ ಮೇಲೆ ಕುಳಿತಿರುವ ಶ್ರೀಮಂತರ ಮೇಲೆ ನೇರ ತೆರಿಗೆ ಧಾಳಿ ಹಣ ಸಂಗ್ರಹಿಸುವುದನ್ನು ಕೈಬಿಟ್ಟು, ಪೆಟ್ರೋಲ್, ಸೀಮೆಎಣ್ಣೆ, ಅಕ್ಕಿ, ಗೋದಿ, ಎಣ್ಣೆಯ ದರ ಏರಿಸಿ ಸಾಮಾನ್ಯ ನಾಗರೀಕನ ಮೇಲೆ 1000 ಕೋಟಿ ಹೊರೆ ಹೊರಿಸಿ ಮತ್ತೆ ಬಜೆಟ್‌ನಲ್ಲಿ ಮತ್ತಷ್ಟು ಹೊರೆ ಹೇರಲು ಅಣಿಯಾಗುತ್ತಿರುವ, "ಹೊಸ ಮುಖ"ದ, ಉತ್ಸಾಹಿ "ಯುವ" ಎಂದೆಲ್ಲಾ ವರ್ಣಿತರಾದ ರಾಜೀವ ಗಾಂಧಿ ಯವರ ಸರ್ಕಾರ

ಕಾಗದದ ಮೇಲೆ ಬಡತನವನ್ನು ಕುಗ್ಗಿಸಿ ಬಡವರನ್ನೆ ಇಲ್ಲವಾಗಿಸುತ್ತಿರುವ, ಕೃಷಿ ಕಾರ್ಮಿಕರಿಗೆ ಗ್ರಾಮೀಣ ಉದ್ಯೋಗ ನಿರ್ಮಾಣ, ಗ್ರಾಮೀಣ ನೀರು ಕುಡಿಯುವ ಯೋಜನೆ, ಹರಿಜನ-ಗಿರಿಜನರ ವಿಶೇಷ ಘಟಕ ಯೋಜನೆಯನ್ನು ಇನ್ನೂ ಅನೇಕ ಬಡವರಿಗೆ ಪರಿಹಾರವೊದಗಿಸುವ ಯೋಜನೆಗಳಲ್ಲಿ ಹಣದ ಕಡಿತ ಮಾಡಿರುವ ಬಡ ಜನ ವಿರೋಧಿ ರಾಜೀವ ಗಾಂಧಿಯವರ ಸರ್ಕಾರ.

ಕೈಗಾರಿಕಾ ಕಾರ್ಮಿಕರನ್ನು ಅವಕಾಶ ಸಿಕ್ಕಿದಾಗಲೆಲ್ಲಾ ದೂರುತ್ತಾ, ಇತರ ದುಡಿಯುವ ಜನರನ್ನು ಅವರ ವಿರುದ್ಧ ಎತ್ತಿ ಕಟ್ಟಲು ಪ್ರಯತ್ನಿ ಸುತ್ತಾ ಅವರ ವೇತನ, ತುಟ್ಟಿ ಭತ್ಯೆಗಳಲ್ಲಿ ಕಡಿತ ಮಾಡಲು ಮಾಲೀಕರ ಪರವಾಗಿ, ಕಾರ್ಮಿಕ ವಿರೋಧಿಯಾಗಿ, ಕಾರ್ಮಿಕ ಶಾಸನಗಳನ್ನು ಬದಲಿಸಲು ಪ್ರಯತ್ನಿಸಿ, ಪ್ರಯತ್ನ ನಡೆಸುತ್ತಿರುವ, ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸಲಾಗದೆಂದು ಕಾರ್ಮಿಕರ ಪ್ರಜಾಸತ್ತಾತ್ಮಕ ಹಕ್ಕುಗಳಿಗೆ ಸರ್ಕಾರಿ ನೌಕರರನ್ನು ಅದಕ್ಷತೆಯ ಹೆಸರಿನಲ್ಲಿ, ಭ್ರಷ್ಟಾಚಾರದ ಹೆಸರಿನಲ್ಲಿ ಯಾವುದೊ ಒಂದು ನೆಪದ ಮೇಲೆ ವಿಚಾರಣೆಯೇ ಇಲ್ಲದೆ, ನ್ಯಾಯವಾದ ಯಾವ ಲೇಪವೂ ಸಂವಿಧಾನದಲ್ಲಿಲ್ಲದ; 310, 311(2) ಕಲಂಗಳನ್ನು ಅಡೆತಡೆಯಿಲ್ಲದೆ ಉಪಯೋಗಿಸ ಬಯಸುವ ಕಾರ್ಮಿಕ ವಿರೋಧಿ ರಾಜೀವ ಗಾಂಧಿಯವರ ಸರ್ಕಾರದ ವಿರುದ್ಧ

ಜನ ಸಮಸ್ತರನ್ನು ಒಗ್ಗೂಡಿಸುವ. ಜಾತಿ, ಮತ ಭೇದಗಳ, ಭಾಷೆ, ದೇಶಗಳ ದ್ವೇಷಾಗ್ನಿಗೆ ತುಪ್ಪ ಸುರಿಯುತ್ತಾ ಧರ್ಮಾಂಧ ಭಾಷಾಂಧ ಶಕ್ತಿಗಳೊಡನೆ ಕೈಗೂಡಿಸಿ ಧೃಢಗೊಳ್ಳುತ್ತಿರುವ ಕಾರ್ಮಿಕರ, ದುಡಿಯುವ ಎಲ್ಲ ಜನರ ಐಕ್ಯತೆಯನ್ನು ಮುರಿದು ಅಧಿಕಾರದಲ್ಲಿ ಉಳಿಯ ಬಯಸುವ, ಏಕ ಪಕ್ಷ ಸರ್ವಾಧಿಕಾರವನ್ನು ಹೇರ ಬಯಸುವ ರಾಜೀವ ಗಾಂಧಿ ಸರ್ಕಾರದ ಕುತಂತ್ರಗಳನ್ನು ನಡೆಯಗೊಡದಿರಲು, ನಮ್ಮ ಜೀವನವನ್ನು ತೊತ್ತಳದುಳಿಯುವ ಅವರ ಪ್ರಯತ್ನಗಳಿಗೆ ಅಡ್ಡ ಹಾಕಲು, ನಮ್ಮ ಬದುಕನ್ನು ಉಸಿರುಗಟ್ಟಿಸಿ ತಾವು ಐಷಾರಾಮದಲ್ಲಿ ಭೋಗ ಜೀವನ ನಡೆಸುವ ಇವರ ಬಯಕೆಯನ್ನು ಸುಡುವ ಜ್ವಾಲಾಗ್ನಿಯಾಗಲು ಜನರನ್ನು ಸಂಘಟಿಸಿ, ಪಕ್ಷದ ಸ್ವತಂತ್ರ ಚಟುವಟಿಕೆಯನ್ನು ಬೆಳಸೋಣ ಫೆ. 17 ರ ಪ್ರತಿಭಟನಾ ಕಾರ್ಯಕ್ರಮದ ಯಶಸ್ಸು ಮುಂದಿನ ಕಾರ್ಯಕ್ರಮಗಳಿಗೆ ಸ್ಫೂರ್ತಿಯಾಗುವಂತೆ ಕಾರ್ಯವೆಸಗೋಣ.

ಕರ್ನಾಟಕ ರಾಜ್ಯಪಾಲರ ಭಾಷಣ - ಟೀಕೆ

– ಪಿ. ರಾಮಚಂದ್ರರಾವ್

ಪ್ರಪ್ರಥಮ ಕರ್ನಾಟಕದ ಜನತಾ ಪಕ್ಷದ ಸರಕಾರವು ರಾಜ್ಯಪಾಲರ ಭಾಷಣದ ಮೂಲಕ "ರಾಜ್ಯದಲ್ಲಿ ಭೀಕರ ಕ್ಷಾಮ" ಇದೆ ಎಂದು ಒಪ್ಪಿಕೊಂಡಿದ್ದಾರೆ. ಮತ್ತು ಎಲ್ಲ ಜನಗಳ ವಿಭಾಗಗಳ ಬೆಂಬಲವನ್ನು ಬರಗಾಲದ ವಿರುದ್ಧ ಹೋರಾಡಲು ವಿನಂತಿ ಮಾಡಿಕೊಂಡಿದ್ದಾರೆ.

ಈ ಬಗ್ಗೆ ತಡವಾದರೂ "ಬರಗಾಲದಂತಹ ಪ್ರಶ್ನೆ"ಯ ಕುರಿತು "ಎಲ್ಲರೂ ಕೂಡಿ ಹೋರಾಡಬೇಕೆಂಬ ತಿಳುವಳಿಕೆ" ರಾಮಕೃಷ್ಣ ಹೆಗಡೆಯವರಿಗೆ ಕೊನೆಗೆ ಬಂದುದನ್ನು ನಾವು ಮಾರ್ಕ್ಸವಾದಿ ಕಮ್ಯುನಿಸ್ಟರವರು ಸ್ವಾಗತಿಸುತ್ತೇವೆ. ಶಾಸಕ ಮುಖಂಡರಾದ ವೆಂಕಟರಾಮಯ್ಯನವರು ಈ ಅಭಿಪ್ರಾಯವನ್ನು ವಿಧಾನ ಸಭೆಯಲ್ಲಿ "ರಾಜ್ಯಪಾಲರ ಭಾಷಣ"ದ ಕುರಿತು ಮಾಡಿದ ತಮ್ಮ ಭಾಷಣದಲ್ಲಿ ವ್ಯಕ್ತಪಡಿಸಿದ್ದಾರೆ.

ಇಂತಹ ಪ್ರಶ್ನೆಯನ್ನು ರಾಷ್ಟ್ರೀಯವಾಗಿ ಪರಿಹರಿಸಲು ಪ್ರಯತ್ನಿಸಬೇಕು ಎಂಬುದು ನಮ್ಮ ನಿಲುವು.

ಸ್ವಾತಂತ್ರ್ಯದ ಹೋರಾಟದ ಕಾಲದಲ್ಲಿ ದೇಶದ ಜನತೆಗೆ ಕೊಟ್ಟ ಆಶ್ವಾಸನೆಗಳಲ್ಲಿ ಇದು ಒಂದಾಗಿತ್ತು. ಆದರೆ ಕಾಂಗ್ರೆಸ್ ಪಕ್ಷದ ಕೇಂದ್ರ ಸರ್ಕಾರವು ಮಾತ್ರ ಬರಗಾಲದ ವಿಷಯದಲ್ಲಾಗಲೀ ವರ್ಷ ವರ್ಷ ನೆರೆಬಂದು ಸಾವಿರಾರು ಹಳ್ಳಿಗಳು ನಾಶವಾಗುವ ವಿಷಯದಲ್ಲಾಗಲೀ ಈ ನಿಲುವು ತೆಗೆದುಕೊಳ್ಳಲಿಲ್ಲ, ಮಾತ್ರವಲ್ಲ ಶಾಶ್ವತ ನೆಲೆಯಲ್ಲಿ ಈ ಸಮಸ್ಯೆಗಳನ್ನು ಬಗೆಹರಿಸುವ ದಿಕ್ಕಿನಲ್ಲಿ ಯಾವದೇ ರೀತಿಯ ಕೆಲಸಕಾರ್ಯಗಳನ್ನು ಮಾಡಲಿಲ್ಲ

ನೆರೆ-ಬರಗಾಲಗಳು ಬಂದಾಗ ಹೆಲಿಕಾಪ್ಟರಿನಲ್ಲಿ ಸುತ್ತಾಡಿ, ಕಾಂಗ್ರೆಸ್ ಮುಖಂಡರನ್ನು ಭೇಟಿಯಾಗಿ, ಸಾಂತ್ವನ ಹೇಳಿ ಪತ್ರಿಕಾ ಹೇಳಿಕೆ ಮೂಲಕ ಶಾಶ್ವತಪರಿಹಾರದ ಆಶ್ವಾಸನೆಗಳ ಸುರಿಮಳೆಗರೆಯುತ್ತಾರೆ ಮಂತ್ರಿ ಮಹಾಶಯರು.

ನೆರೆಹಾವಳಿ-ಬರಗಾಲದ ಹೆಸರಿನಲ್ಲಿ ಕೋಟ್ಯಾವಧಿ ರೂಪಾಯಿ ಪ್ರತಿ ವರ್ಷ ಖರ್ಚಾಗುತ್ತಿದೆ. ಆದರೆ ಇವೆರಡೂ ಎಡೆಬಿಡದೆ ಹೆಚ್ಚೆಚ್ಚು ಹಾನಿ ಮಾಡುತ್ತಲೇ ಇವೆ.

ಚೀನಾದಲ್ಲಿ ಇಂಥ ಭೀಕರ ಸಮಸ್ಯೆಗಳನ್ನು ಕುರಿತು ಚೀನಾ ಕಮ್ಯೂನಿಸ್ಟ ಸರಕಾರ ಎಷ್ಟೊಂದು ಗಂಭೀರವಾಗಿ ಪರಿಗಣಿಸಿ ಶಾಶ್ವತ ಕ್ರಮ ವಹಿಸುತ್ತದೆಂಬುದನ್ನು ನೋಡಿಯೂ ನಾವು ಏನೂ ಮಾಡದಿರುವುದು ನಿಜವಾಗಿ ನಾಚಿಕೆಗೇಡು.

ಇನ್ನೊಂದು ನಾಟಕ ಬರಪರಿಹಾರದ ವಿಷಯದಲ್ಲಿ ನಡೆಯುತ್ತಿರುವುದನ್ನು ನಾವು ಕಾಣಬಹುದು, "ರಾಜ್ಯ ಸರಕಾರವು ಬರಬಂದಾಕ್ಷಣ ತ್ವರಿತವಾಗಿ ಅಂಕೆ ಸಂಖೆಗಳನ್ನು (ಅವು ಎಷ್ಟು ಸತ್ಯ ಎಂಬುದರ ಬಗ್ಗೆ ಯಾರಿಗೂ ತಿಳಿದಿಲ್ಲ, ತಿಳಿದುಕೊಳ್ಳಲೂ ಯಾರೂ ಪ್ರಯತ್ನ ಮಾಡುತ್ತಿಲ್ಲ) ಸಂಗ್ರಹಿಸಿ, ಕೇಂದ್ರ ಸರಕಾರಕ್ಕೆ ಮನವಿ ಸಲ್ಲಿಸಿ ನೂರಾರು ಕೋಟಿಯ ಸಹಾಯಕ್ಕೆ ಮೊರೆ ಹೋಗುವುದು, ಮತ್ತು ಎಲ್ಲಿಸಿಗುತ್ತದೋ ಅಲ್ಲಿಂದ ಹಣ ಸಂಗ್ರಹಿಸಿ ಅವುಗಳನ್ನು "ಪರಿಹಾರ ಕಾಮಗಾರಿ"ಗಳಿಗೆ ಬಿಡುಗಡೆ ಮಾಡುವುದು ಇದು ನಡೆದು ಬಂದ ಪರಿಪಾಠ.

ಕೇಂದ್ರದ ಕಾಂಗ್ರೆಸ್ ಸರಕಾರವಂತೂ ಈ ಬೇಡಿಕೆ "ಕಾಂಗ್ರೆಸ್ಸೇತರ ಸರಕಾರಗಳಿಂದ" ಬಂದಿದ್ದರೆ ಕಾವು ನಾಟಕೀಯವಾಗಿ ಒಂದು ಕೇಂದ್ರ ಸರಕಾರದ ತಂಡವನ್ನು ಕಳುಹಿಸಿ ಕೆಲವು ಬರಗಾಲದ ಪ್ರದೇಶಗಳಿಗೆ ಹೋಗಿ, ಪ್ರತ್ಯಕ್ಷ ಕಂಡು ಚರ್ಚಿಸಿ, ಪುನಃ ದಿಲ್ಲಿಗೆ ಹೋಗಿ "ಸ್ವಲ್ಪ ಹಣ" ಸಾಲವಾಗಿ ಬಿಡುಗಡೆ ಮಾಡುತ್ತಾ ಬರುವುದು ಸಂಪ್ರದಾಯವಾಗಿದೆ.

ಆದರೆ ಈ ತನಕ ಈ ಪ್ರಶ್ನೆಯನ್ನು ರಾಷ್ಟ್ರೀಯ ಪ್ರಶ್ನೆಯಾಗಿ ನೋಡಿ, ಯುದ್ಧೋಪಾದಿಯಲ್ಲಿ ಪರಿಹಾರ ಕಂಡುಕೊಳ್ಳಲು ಕಾಂಗ್ರೆಸ್ ಸರಕಾರವಂತೂ ಪ್ರಯತ್ನಿಸಲೇ ಇಲ್ಲ.

ಈ ವರ್ಷವನ್ನೇ ತೆಗೆದುಕೊಳ್ಳಿ, 32 ಮಿಲಿಯ ಟನ್ ಗೋಧಿ, ಅಕ್ಕಿ ಮೊದಲಾದ ಧಾನ್ಯಗಳ ರಾಶಿ ಕೇಂದ್ರ ಸರಕಾರದ ಗೋಡೌನುಗಳಲ್ಲಿರುವಾಗ ಈ ಧಾನ್ಯದ ಒಂದಂಶವನ್ನಾದರೂ ಒಡನೆ ಕಳುಹಿಸಿ "ಎಲ್ಲರಿಗೂ ಕೆಲಸ ಕೊಡುವ" ಹಾಗೂ ಈ ಕೆಲಸದ ಮೂಲಕ ಖಾಯಂ ಬರ ಪರಿಹಾರ ಕಾಮಗಾರಿಗಳನ್ನು ರೂಪಿಸಿಕೊಳ್ಳುವ ಕೆಲಸ ಯಾಕೆ ಮಾಡಬಾರದಿತ್ತು?

ಕೋಲಾರ, ಚಿಕ್ಕ ಬಳ್ಳಾಪುರಕ್ಕೆ ಹೋಗಿ ಸಭೆ ಜರಗಿಸಿದ ಇತ್ತೀಚಿಗೆ ದಿಢೀರನೆ ಕಾಂಗ್ರೆಸ್ ಅಧ್ಯಕ್ಷರಾದ ಆಸ್ಕರ್ ಫೆರ್ನಾಂಡೀಸರ ಮಾತು ಕೇಳಿ "ನಾನು ಬೇಗನೇ ಈ ಬಗ್ಗೆ ಪರಿಹಾರ ಒದಗಿಸುತ್ತೇನೆ."

ಎಂಥಹ ದರ್ಪ! ಎಂತಹ ಕಣ್ಣೊರೆಸಿಕೆ!

ಪಶ್ಚಿಮ ಬಂಗಾಲದಲ್ಲಿ ಬರ ಬಂದಾಗ ನೆರೆಬಂದಾಗ ಆ ಸರಕಾರವು ಎಲ್ಲ ಜನರ ವಿಭಾಗಗಳ ಮತ್ತು ಸಂಘಟನೆಗಳ ಸಹಕಾರ ಪಡೆದು ಯುದ್ಧೋಪಾದಿಯಲ್ಲಿ ಅವುಗಳನ್ನು ಹೇಗೆ ಎದುರಿಸಿದರು ಎಂಬುದನ್ನು ಮಾದರಿಯನ್ನಾಗಿಟ್ಟುಕೊಂಡು ರಾಮಕೃಷ್ಣ ಹೆಗ್ಗಡೆಯವರು ರಾಜ್ಯದ ಪರಿಹಾರಕ್ಕೆ ಶ್ರಮಿಸಲಿ ಎಂದು ನಮ್ಮ ಹಾರೈಕೆ.

Printed & Published by P. Ramachandra Rao on behalf of the Communist Party of India (Mrxist) Karnataka State Committee, K. V. Temple Street, Sultanpet, Bangalore-560053 Editorial and managariel office, L-56, K. V. Temple Street, Sultanpet, B-53 Phone : 75331

Editor P. Ramachandra Rao Managing Editor : N. K. Upadhyaya